Clauses 2 to 5

MR, DEPUTY SPEAKER.—The question is:

"That clause 2 to 5, both inclusive, do stand part of the Bill."

The motion was adopted.

Clauses 2 to 5, both inclusive were added to the Bill.

CLAUSE 1 Etc.

MR DEPUTY SPEAKER.—There is an amendment to this clause for Sri T. R. Shamanna. It may be moved.

SRI T. R. SHAMANNA.—I do not propose to move my amendment.

MR DEPUTY SPEAKER.—The question is:

"That clause 1, the Long tittle, the Preamble and the Enacting Formula do stand part of the Bill."

The motion was adopted.

Clause 1, Long Title and the Preamble and the Enacting Formula were added to the Bill.

Motion to pass.

SRI D. K. NAIKAR.—I beg to move:

"That the Karnataka Municipal Laws (Amendment) Bill, 1976, be passed."

MR. DEPUTY SPEAKER.—The question is;

"That the Karnataka Municipal Laws (Amendment) Bill, 1976 be passed."

Bangalore Improvement Boards Bill, 1976.
Motion to Consider.

The motion was adopted and the Bill was passed.

SRI D. K. NAIKAR (Minister for Law and Municipal Administration) —I beg to move:

"That the Karnataka Improvement Boards Bill, 1976 be taken into consideration."

MR. DEPUTY SPEAKER.—Motion moved.

"That the Karnataka Improvement Boards Bill, 1976 be taken into consideration."

4-30 P.M.

ಶ್ರೀ ಡಿ.ಕೆ. ನಾಯ್ಕರ್–ಸಭಾಪತಿಗಳೇ, ನಾನು ಒಂದು ತಿದ್ದುಪಡಿಯನ್ನು ತಂದಿದ್ದೇನೆ ಬೆಂಗಳೂರು ನಗರದಲ್ಲಿ ಮತ್ತು ಮೈಸೂರು ನಗರದಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡುಗಳಾಗಿ ಅದಕ್ಕೆ ಕಾನೂನುಗಳು ಇವೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಅತಿಶಯವಾಗಿ ಬೆಳೆಯತಕ್ಕಂಥ ನಗರಗಳಿಗೂ ಕೂಡ ಒಂದು ಶಿಸ್ತು ಮತ್ತು ಅಚ್ಚುಕಟ್ಟಾಗಿ ಬೆಳೆಯಬೇಕು ಎನ್ನುವ ಉದ್ದೇಶದಿಂದ ಮತ್ತು ೨೦ ಪಾಯಿಂಟ್ ಪ್ರೋಗಾಂನಲ್ಲಿ ಅರ್ಬನ್ ಲ್ಯಾಂಡ್ ಬಗ್ಗೆ ಏನು ಹೇಳಿದ್ದಾರೋ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರವಾಗಿ, ಟ್ರಸ್ಟ್ ಬೋರ್ಡ್ ಇಲ್ಲದಂಥ ಕೆಲವು ಸಿಟಿಗಳಲ್ಲಿ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸ್ಲಂ ಇಂಪ್ರೂವ್‌ಮಾಡುವುದಕ್ಕೋಸ್ಕರವಾಗಿ ಮತ್ತು ಪಟ್ಟಣಗಳು ಒಂದು ವೈಶಿಷ್ಟ್ಯವಾದ ರೀತಿಯಲ್ಲಿ ಬೆಳೆಯಬೇಕು ಎಂದು ಇದನ್ನು ತಂದಿದ್ದೇವೆ. ಈಗಿನ ಪರಿಸ್ಥಿತಿಯಲ್ಲಿ ಪಟ್ಟಣಗಳ ಬೆಳವಣಿಗೆಯನ್ನು ಹತೋಟಿ ಮಾಡುವುದಕ್ಕೆ ಆಗುತ್ತಿಲ್ಲ. ಖಾಸಗೀ ಜನರು ತಮ್ಮ ಆಸ್ತಿಯನ್ನು ಲೇಔಟ್ ಮಾಡಿಕೊಂಡು ಮಾರಾಟ ಮಾಡಿದ್ದನ್ನು ಮೊಟಕು ಮಾಡುವುದಕ್ಕಾಗಿಯೂ ಇಂಥ ಬೋರ್ಡುಗಳನ್ನು ಸ್ಥಾಪನೆ ಮಾಡುವುದನ್ನು ತೆಗೆದುಕೊಂಡಿದ್ದೇವೆ. ನನಗೆ ತಿಳಿದ ಮಟ್ಟಿಗೆ ಇದರ ಬಗ್ಗೆ ಮಾತನಾಡುವಂಥ ಸದಸ್ಯರು ಯಾರೂ ಇಲ್ಲವೆಂದು ಭಾವನೆ ಮಾಡಿದ್ದೇನೆ, ಇದನ್ನು ತಾವು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).–ಮಾನ್ಯ ಸಭಾಪತಿಗಳೇ ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ವಿಷಯದಲ್ಲಿ ಟ್ರಸ್ಟ್ ಬೋರ್ಡುಗಳನ್ನು ಹುಬ್ಬಳ್ಳಿ ಧಾರವಾಡ, ಬೆಳಗಾಂ, ಬಳ್ಳಾರಿ, ಭದ್ರಾವತಿ, ದಾವಣಗೆರೆ ಮತ್ತು ಶಿವಮೊಗ್ಗ ಊರುಗಳಲ್ಲಿ ಜಾರಿಗೆ ತರಬೇಕು ಎನ್ನತಕ್ಕದು ಇದೆ. ಈಗಾಗಲೇ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು ಇದೆ ಇದಕ್ಕೆ ನನ್ನ ಮೊದಲನೆಯ ಆಕ್ಷೇಪಣೆ ಏನೆಂದರೆ. ಇಂಥಾದ್ದನ್ನೂ ಕೂಡ ಆರ್ಡಿನರ್ಸ್ ಮುಖಾಂತರ ತರುವುದಕ್ಕೆ ಎಂಥ ಅವಶ್ಯಕತೆ ಇತ್ತು ಎನ್ನುವುದು. ಇದರ ಬಗ್ಗೆ ಸುಗ್ರೀವಾಜ್ಞೆ ಬಂದಾಗ, ಆಸೆಂಬ್ಲಿ ಪ್ರಾರಂಭವಾಗುವುದು ಕೆಲವೆ ದಿವಸಗಳತ್ತು. ಅದಕ್ಕೋಸ್ಕರ ನಾನು ಇದರ ಬಗ್ಗೆ ಸುಗ್ರೀವಾಜ್ಞೆಯನ್ನು ಹೊರಡಿಸುವಂಥ ಅವಶ್ಯಕತೆ ಏನು ಎನ್ನುವುದು ಎಂದು ಕೇಳುತ್ತಿದ್ದೇನೆ. ಎರಡನೆಯದಾಗಿ, ಇದನ್ನು ನೋಡಿದರೆ, ಅನೇಕ ಸ್ಥಳೀಯ ಸಂಸ್ಥೆಗಳಲ್ಲಿ ಸರ್ಕಾರಕ್ಕೆ ನಂಬಿಕೆ ಇಲ್ಲ ಎನ್ನುವುದು ವ್ಯಕ್ತವಾಗಿದೆ. ಏಕೆಂದರೆ, ಇಂಥ ಟ್ರಸ್ಟ್ ಬೋರ್ಡುಗಳನ್ನು ಮಾಡಿ ಲೋಕಲ್ ಬಾಡಿಗಳಿಗೆ ಇರತಕ್ಕಂಥ ಹಕ್ಕನ್ನು ಒಂದಾಗುತ್ತಾ ಒಂದನ್ನು ಕಸಿದುಕೊಂಡು ಹೋಗುತ್ತಿರುವುದು ಸರಿಯಾದುದಲ್ಲ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಿರತಕ್ಕ ಪದ್ಧತಿಯ ಪ್ರಕಾರ ಮುನಿಸಿಪಾಲಿಟಿಗಳಿಗೆ ಇರತಕ್ಕ ಕೆಲಸವಾದರೂ ಇಷ್ಟು. ಒಂದು ರಸ್ತೆಗಳ ಕಸವನ್ನು ಗುಡಿಸುವುದು ಇನ್ನೊಂದು ರಸ್ತೆಗಳನ್ನು ರಿಪೇರಿ ಮಾಡುವುದು. ಮಿಕ್ಕ ಯಾವ ಕೆಲಸಗಳೂ ಇಲ್ಲ ಎನ್ನುವುದನ್ನು ಸ್ಪಷ್ಟವಾಗಿ ನೋಡುತ್ತಿದ್ದೇವೆ. ವಾಟರ್ ಸಪ್ಲೈ ಸೂಯರೇಜ್ ಬೋರ್ಡು ಮಾಡಿ. ಕಾರ್ಪೊರೇಷನ್‌ನಿಂದ ಅದನ್ನು ಬೇರ್ಪಡಿಸಿದರು, ಎಲೆಕ್ಟ್ರಿಸಿಟಿ ಬೋರ್ಡಿನವರು ಎಲೆಕ್ಟ್ರಿಕ್ ಚಾರ್ಜನ್ನು ಅನ್ನು ವಸೂಲು ಮಾಡುವಂತೆ ಮಾಡಿದ್ದಾರೆ. ಅನೇಕ ಪ್ಲಾನಿಂಗ್ ಅಥಾರಿಟೀಸ್ ಮಾಡಿ, ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಿಗೆ ಇದ್ದಂಥ ಹಕ್ಕನ್ನು ಕಸಿದುಕೊಂಡು ಟ್ರಸ್ಟ್ ಬೋರ್ಡುಗಳಿಗೆ ಕೊಡತಕ್ಕುದ್ದು ಎದ್ದು ಕಾಣುತ್ತದೆ. ಇದಕ್ಕೆ ನನ್ನ ಮುಖ್ಯ ವಾದಂಥ ವಿರೋಧ ಏನೆಂದರೆ, ಇದರಲ್ಲಿ ೭೨ ಕಲಂಗಳು ಇವೆ. ಅವುಗಳ ಪೈಕಿ ೨೪ ಕಲಂಗಳಲ್ಲಿ ಸರ್ಕಾರದವರು ತಮ್ಮ ಅಧಿಕಾರವನ್ನು ಇಟ್ಟುಕೊಂಡಿರತಕ್ಕುದ್ದನ್ನು ನಾವು ಕಾಣಬಹುದು ಸುಮ್ಮನೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಬೇಕಾದರೂ ಸರ್ಕಾರಕ್ಕೆ ಹೋಗಬೇಕು ಇದರಿಂದ ಏನಾಗುತ್ತದೆಂದರೆ. ಟ್ರಸ್ಟ್ ಬೋರ್ಡುಗಳಿಗೆ ಮತ್ತು ಇತರೆ ಬೋರ್ಡು ಸ್ಥಾಪನೆ ಮಾಡುವಾಗ ಸಾಧಾರಣವಾಗಿ ಸರ್ಕಾರದವರು ತಮಗೆ ಬೇಕಾದವರನ್ನು ಚೇರ್ಮನ್ ಆಗಿ ಹಾಕತಕ್ಕದ್ದಾ ರೂಢಿಯಾಗುತ್ತದೆ ಸರ್ಕಾರದವರು ತಮ್ಮ ಬೇಕಾದ ಅಧಿಕಾರಿಗಳನ್ನು ಹಾಕುತ್ತಾರೆ. ಹೀಗೆ ಮಾಡಿ ಹೆಚ್ಚು ಕಡಿಮೆ ಟ್ರಸ್ಟ್ ಬೋರ್ಡಿನ ಪೂರ್ಣ ಅಧಿಕಾರ ಮತ್ತು ಆಡಳಿತ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರತಕ್ಕುದ್ದನ್ನು ನಾವು ಪ್ರತ್ಯಕ್ಷವಾಗಿ ಅಲ್ಲಿದ್ದಿದ್ದರೂ ಪರೋಕ್ಷವಾಗಿ ನೋಡುತ್ತಿದ್ದೇವೆ. ಇಂಥ ವಿಚಾರಗಳನ್ನು ನಾವು ಹೇಳಿವಾಗ ಅದೂ ಆಟೋನಾಮಸ್ ಬಾಡಿ ಎಂದು ನಮಗೆ ಉತ್ತರ ಕೊಡುತ್ತಾರೆ. ನಿಜವಾಗಿಯೂ ಹೇಳಬೇಕಾದರೆ ಇದೂ ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಗೆ ವಿರೋಧವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಪಟ್ಟಣಗಳಲ್ಲಿ ಆಕ್ರಮವಾಗಿ ಬೆಳೆದು ಅನಾನುಕೂಲಗಳು ಹೆಚ್ಚಾಗುತ್ತವೆನ್ನುವ ಉದ್ದೇಶದಿಂದ ಇದನ್ನು ತಂದಿದ್ದಾರೆಂದೂ ಮಾನ್ಯ ಮಂತ್ರಿಗಳು ತಿಳಿಸಿದರು. ಇದಕ್ಕೆ ನನ್ನ ಅಬ್ಸರ್ವೇಷನ್

ಏನೆಂದರೆ, ಪಟ್ಟಣಗಳು ಹೆಚ್ಚಾಗಿ ಬೆಳೆಯುತ್ತಾ ಇರುವುದಕ್ಕೆ ಕಾರಣ ಹಳ್ಳಿಗಳಲ್ಲಿರತಕ್ಕ ಜನ ಪಟ್ಟಣಗಳನ್ನು ಸೇರುತ್ತಾರೆ ಎನ್ನುವುದನ್ನು ನಾವು ಗಮನಿಸಬೇಕು. ಈಗ ಬೆಂಗಳೂರು ನಗರದ ಜನಸಂಖ್ಯೆ ಸುಮಾರು ೩೦ರಿಂದ ೪೦ರಷ್ಟು ಏರುತ್ತಿದೆ. ಅದೇ ರೀತಿ ಅನೇಕ ಪಟ್ಟಣಗಳೂ ಬೆಳೆಯುತ್ತಿವೆ ಪಟ್ಟಣಗಳು ಬೆಳೆಯದ ಹಾಗೆ ಹಳ್ಳಿಗಳಲ್ಲಿಯೇ ಸಾಕಾದಷ್ಟು ಅನುಕೂಲಗಳನ್ನು ಮಾಡಿಕೊಡಬೇಕು ಇಲ್ಲವೇ ಹೋದರೆ ನಗರಗಳಲ್ಲಿ ಮಿತಿ ಮೀರಿದ ಜನಸಂಖ್ಯೆಯನ್ನು ನಾವು ನೋಡತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಗ್ರಾಮಾಂತರಗಳಲ್ಲಿ ಏನಾದರೂ ವಸತಿ ಸೌಕರ್ಯಗಳನ್ನು ಮಾಡಿ ಹಳ್ಳಿಗಳಲ್ಲಿಯೇ ಇರುವಂತೆ ಅವರ ಮನೋಭಾವವನ್ನು ಪರಿವರ್ತನೆ ಮಾಡಿದರೆ ಒಳ್ಳೆಯದು. ಬೆಂಗಳೂರಿನ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡು ಸ್ಥಾಪನೆಯಾಗಿ ೧೫ ವರ್ಷಗಳಾಗಿವೆ. ನಾನು ಅನೇಕ ಸಲ ಇದು ನೈದರ್ ಇಂಪ್ರೂವ್‌ಮೆಂಟ್‌ಬೋರ್ಡ್ ನಾರ್ ಟ್ರಸ್ಟ್‌ಬೋರ್ಡು ಎಂದು ಟೀಕೆ ಮಾಡಿದ್ದೇನೆ. ಇದರಲ್ಲಿ ಸಿಟಿಯನ್ನು ಇಂಪ್ರೂವ್‌ಮೆಂಟ್ ಮಾಡತಕ್ಕ ವ್ಯವಸ್ಥೆಯಿಲ್ಲ. ಇದರಲ್ಲಿ ಸದಸ್ಯರಾಗಿರತಕ್ಕವರು ಜನಗಳ ತಮ್ಮ ಟ್ರಸ್ಟ್ ಕಳೆದುಕೊಂಡಿದ್ದಾರೆ ಎಂದು ನಾನು ಟೀಕೆ ಮಾಡಬೇಕಾಗುತ್ತದೆ. ಏಕೆಂದರೆ, ಇವರು ಮಾಡಿರತಕ್ಕ ಕೆಲಸ ಹೆಚ್ಚು ಭಾಗ ಸೈಟುಗಳನ್ನು ಮಾಡಿ ಹಂಚತಕ್ಕದ್ದು. ಹೊಸ ಹೊಸ ಲೇ ಔಟುಗಳನ್ನು ಮಾಡುವುದು ಖಾಸಗಿಯವರು ಇಂಥ ಲೇ ಔಟುಗಳನ್ನ ಮಾಡಿ ಸೈಟುಗಳನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡುವುದು ಈ ಎರಡು ಕೆಲಸಗಳನ್ನು ಮಾತ್ರ ಟ್ರಸ್ಟ್ ಬೋರ್ಡು ಮಾಡುತ್ತಿದೆ. ಟ್ರಸ್ಟ್ ಬೋರ್ಡು ಇದ್ದರೂ ಪಟ್ಟಣಗಳು ಅಕ್ರಮವಾಗಿ ಬೆಳೆದಿರತಕ್ಕ ನಿದರ್ಶನಗಳು ಇವೆ. ಟ್ರಸ್ಟ್ ಬೋರ್ಡು ಇರುವುದಕ್ಕೆ ಮುಂಚೆ ಬೆಂಗಳೂರಿನಲ್ಲಿ ಸುಮಾರು ೬೦ ಸ್ಲಂಗಳು ಇದ್ದುವು ಈಗ ೧೫೦ ಸ್ಲಂಗಳು ಆಗಿವೆ. ಟ್ರಸ್ಟ್ ಬೋರ್ಡು ಬಂದಿದ್ದರಿಂದ ಸ್ಲಂಗಳು ನಿವಾರಣೆಯಾಗುವುದಕ್ಕೆ ಬದಲಾಗಿ ಸಹಸ್ರಾರು ಸ್ಲಂಗಳು ಹುಟ್ಟಿಕೊಂಡಿವೆ. ಟ್ರಸ್ಟ್ ಬೋರ್ಡು ಆದಮೇಲೆ ಸುಮಾರು ೪೦ ಸಾವಿರ ಮನೆಗಳನ್ನು ಖಾಸಗೀ ಯವರು ಲೇಔಟುಗಳನ್ನು ಮಾಡಿ ಅಕ್ರಮವಾಗಿ ಕಟ್ಟಿದ್ದಾರೆ. ಇಂಥ ಬಡಾವಣೆಗಳನ್ನು ಮತ್ತು ಲೇಔಟುಗಳನ್ನು ಟ್ರಸ್ಟ್ ಬೋರ್ಡಿನವರು ಮತ್ತು ಕಾರ್ಪೊರೇಷನ್‌ನವರು ರೆಗ್ಯುಲರೈಸ್ ಮಾಡಿದ್ದಾರೆ. ಇದರಿಂದ ಏನಾಗುತ್ತದೆಂದರೆ, ಖಾಸಗಿ ಲೇಔಟುಗಳನ್ನು ಮಾಡಿ ಭೂಮಾಲೀಕರು ಸ್ವಲ್ಪ ಪಾಲು ಸಿಹಿದ ಪಾಲು ಸಂಬಂಧಪಟ್ಟ ಏಜೆಂಟರಿಗೆ ಸೇರುತ್ತದೆ. ಆನೇಕರು ಈ ರೀತಿ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಲೂಟಿಮಾಡಿದ್ದಾರೆ. ಟ್ರಸ್ಟ್ ಬೋರ್ಡಿನವರು ಇದನ್ನು ಸರಿಯಾಗಿ ನೋಡಿದ ಪಕ್ಷದಲ್ಲಿ ಇಂಥ ಅಕ್ರಮಗಳು ಆಗುತ್ತಾ ಇರಲಿಲ್ಲ. ಬೆಂಗಳೂರು ಟ್ರಸ್ಟ್ ಬೋರ್ಡು, ಬೆಂಗಳೂರು ಸರಿಯಾಗಿ ಬೆಳೆಯುವುದಕ್ಕೆ ತಕ್ಕಂಥ ಕೆಲಸ ಮಾಡಿಲ್ಲ.

ಇದರಲ್ಲಿ ನನ್ನ ವಿಶೇಷವಾದಂಥ ಒಂದು ಸಲಹೆ ಇಷ್ಟೆ. ಅದು ಏನೆಂದರೆ ನೀವು ಟ್ರಸ್ಟ್ ಬೋರ್ಡನ್ನು ಮಾಡಿದ ತಕ್ಷಣ ಮೊಟ್ಟಮೊದಲನೆಯದಾಗಿ ನೀವು ಮಾಡಬೇಕಾದ ಒಂದೇ ಒಂದು ಕೆಲಸ ಅಂದರೆ ಟ್ರಸ್ಟ್‌ಬೋರ್ಡಿನ ವಿಸ್ತೀರ್ಣಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ತಮ್ಮ ಬೌಂಡರಿ ಎಷ್ಟಿದೆ ಅಷ್ಟರವರಗೆ ಮಾಡಿ. ಈ ಮಧ್ಯದಲ್ಲಿ ಹೊಸದಾಗಿ ರೆವಿನ್ಯೂ ಸೈಟುಗಳು ಬರತಂತೆ ನೋಡಿಕೊಂಡು ತಯಾರಿಸಬೇಕು, ಸಣ್ಣ ಸಣ್ಣದಾಗಿ ಖಿಮಿನುಗಳನ್ನು ಅಕ್ವೈರ್ ಮಾಡಿಕೊಳ್ಳುವುದನ್ನು ಬಿಟ್ಟು ಬಲ್ಕ್ ಆಗಿ ಅಕ್ವಿಜಿಷನ್ ಮಾಡಿಕೊಳ್ಳಿ. ಈರೀತಿ ಮಾಡಿಕೊಳ್ಳುವುದರಿಂದ ಬಹಳ ಅನುಕೂಲವಾಗುತ್ತದೆ ಈ ಮಾತನ್ನು ನಾನು ಎತಕ್ಕೆ ಹೇಳುತ್ತೇನೆ ಅಂದರೆ ಬೆಂಗಳೂರು ನಗರದಲ್ಲಿ ಒಂದೊಂದು ಮೂಲೆಯಲ್ಲೂ ಜಮೀನು ಅಕ್ವೈರ್ ಮಾಡಿಕೊಳ್ಳುತ್ತಾ ಬಂದಾಗ ನಗರದ ಒಳಭಾಗದಲ್ಲಿ ರೆವಿನ್ಯೂ ಪಾಕೆಟ್ಸ್ ಹುಟ್ಟಿಕೊಳ್ಳುವುದಕ್ಕೆ ಅವಕಾಶವಾಯಿತು. ಅಲ್ಲದೆ ಇದರಿಂದ ಪ್ರೈವೇಟ್ ಲೇ ಔಟ್‌ಗಳೂ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದರ ಬಗ್ಗೆ ಟ್ರಸ್ಟ್‌ಬೋರ್ಡ್‌ನವರು ಸಾಕಷ್ಟು ಎಚ್ಚರಿಕೆಯನ್ನು ವಹಿಸಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ,

ಈಗ ನಿಮ್ಮ ಮೇಲೆ ನನ್ನ ಒಂದು ದೊಡ್ಡ ಆರೋಪ ಇದೆ. ಅದು ಏನೆಂದರೆ ನೀವು ಟ್ರಸ್ಟ್ ಬೋರ್ಡನ್ನು ಹೊಸದಾಗಿ ಸೃಷ್ಟಿ ಮಾಡಿ ತಮ್ಮ ಪಕ್ಷದವರಿಗೆ ಸಹಾಯವಾಗಬೇಕು ಎನ್ನುವವರನ್ನು ಅಧ್ಯಕ್ಷಿಗೆ ಸದಸ್ಯರನ್ನಾಗಿ ನೇಮಕ ಮಾಡುತ್ತಿದ್ದೀರಿ. ಹೀಗೆ ಮಾಡುತ್ತಾ ಹೋದಲ್ಲಿ ನಿಜವಾಗಿಯೂ ನಗರಕ್ಕೆ ಅನುಕೂಲ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಇನ್ನು ಟ್ರಸ್ಟ್‌ಬೋರ್ಡಿನ ಛೇರ್ಮನ್ ಅವರಿಗೆ ಬೇಕಾದಷ್ಟು ಕೆಲಸ ಕಾರ್ಯಗಳಿರುತ್ತವೆ. ಅಂಥ ಜಾಗಕ್ಕೆ ಅಸೆಂಬ್ಲಿ ಮೆಂಬರ್‌ಗಳನ್ನು ತೆಗೆದುಕೊಂಡು ಹೋಗಿ ಹಾಕುತ್ತೀರಿ. ಇದರಿಂದ ಅವರು ಕೆಲಸ ಮಾಡುವುದಕ್ಕಾಗುತ್ತಯೇ ? ಒಬ್ಬ ಅಸೆಂಬ್ಲಿ ಮೆಂಬರ್ ಅಂದರೆ ವರ್ಷದಲ್ಲಿ ೩-೪ ತಿಂಗಳು ಇಲ್ಲಿ ಬಂದು ಕುಳಿತು ಕೆಲಸ ಮಾಡಬೇಕಾಗುತ್ತದೆ. ಇದರ ಜೊತೆಗೆ

ಅವನಿಗೆ ನಾನಾ ಕೆಲಸಗಳಿರುತ್ತವೆ. ಆ ಸಂದರ್ಭದಲ್ಲಿ ಟ್ರಸ್ಟ್‌ಬೋರ್ಡಿನ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಅದಂದರಿಂದ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್‌ಗೆ ನಿಮ್ಮ ಪಕ್ಷದ ವರನ್ನೇ ಅಲ್ಲಿಗೆ ಮೆಂಬರ್ ಆಗಿ ಹಾಕಬೇಕೆ ? ಬೇರೆ ಯಾರೂ ಇಲ್ಲವೆ ಎಂಬುದನ್ನು ಕೇಳಬಯಸುತ್ತೇನೆ. ಇವತ್ತು ನೀವು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್‌ಗೆ ಚುಣಾವಣೆ ಮಾಡುವ ಸದಸ್ಯರನ್ನು ನೋಡಿದರೆ ಮುನಿಸಿಪಾಲಿಟಿಯಿಂದ ಇಬ್ಬರು ಸದಸ್ಯರನ್ನು ಬಿಟ್ಟರೆ ಅಲ್ಲಿ ಇನ್ನುಳಿದವರಲ್ಲಾ ಸರ್ಕಾರದಿಂದ ಆರಿಸಿ ಬಂದವರೇ ಆಗಿದ್ದಾರೆ. ನಾನು ಹೇಳುವುದೇನೆಂದರೆ ಈ ಟ್ರಸ್ಟ್‌ಬೋರ್ಡ್‌ಗೆ ಸದಸ್ಯರನ್ನು ಆರಿಸುವಾಗ ಕೈಯಿ, ಬಾಯಿ ಶುದ್ಧವಾಗಿರುವವರನ್ನು ಅಲ್ಲಿಗೆ ಹಾಕುವುದಕ್ಕೆ ವ್ಯವಸ್ಥೆ ಮಾಡಿ. ಇದರಿಂದ ನಗರದ ನಾಗರೀಕರಿಗೆ ಅನುಕೂಲವಾಗುತ್ತದೆ. ಮತ್ತು ಫೇರ್‌ಮನ್ ಸ್ಥಾನಕ್ಕೆ ಆಯ್ಕೆ ಮಾಡಬೇಕಾಗಿದ್ದರೆ ಟ್ರಸ್ಟ್‌ಬೋರ್ಡ್‌ನ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವಂತಹ ಅನುಭವವುಳ್ಳವರನ್ನು ಮಾಡಿ, ಇದರಲ್ಲಿ ಇನ್ನೊಂದು ಏನಾಗುತ್ತದೆ ಎಂದರೆ ಈ ಟ್ರಸ್ಟ್‌ಬೋರ್ಡ್‌ನಲ್ಲಿ ಪ್ರಾರಂಭದಲ್ಲಿ ಚೆನ್ನಾಗಿ ಕೆಲಸ ನಡೆಸುತ್ತಾರೆ ಅನಂತರ ಅವರು ಲಕ್ಷಾಧಿಪತಿಗಳಾಗುತ್ತಾರೆ. ಅದು ಏಕೆ ಈರೀತಿ ಆಗುತ್ತದೋ ನನಗಂತೂ ಗೊತ್ತಾಗುವುದಿಲ್ಲ.

ಸ್ವಾಮಿ, ಮಾನ್ಯ ಅಧ್ಯಕ್ಷರೆ. ಇದೇ ಸಂಧರ್ಭದಲ್ಲಿ ಇನ್ನೊಂದು ಅಂಶವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಅದು ಏನೆಂದರೆ ಟ್ರಸ್ಟ್‌ಬೋರ್ಡ್‌ನಲ್ಲಿ ಯಶವುದಾದರೂ ಒಂದು ಕೆಲಸವನ್ನು ತೆಗೆದು ಕೊಳ್ಳುವಾಗ ಏನು ಉದ್ದೇಶದಿಂದ ಅದನ್ನು ತೆಗೆದುಕೊಂಡು ಯಾವ ಯಾವ ರೀತಿಯಲ್ಲಿ ಪ್ಲಾನ್ ಹಾಕಿ ಕೊಳ್ಳುತ್ತಾರೋ ಅದನ್ನು ಅದಷ್ಟು ಜಾಗ್ರತೆಯಾಗಿ ಮುಗಿಸುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದ ಪಕ್ಷದಲ್ಲಿ ನಗರದ ನಾಗರೀಕರಿಗೆ ಬಹಳ ತೊಂದರೆಯಾಗುವುದಲ್ಲದ ಟ್ರಸ್ಟ್‌ಬೋರ್ಡ್‌ಗೂ ಸಹ ವ್ಯಥಾ ಖರ್ಚು ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ಬಿ. ವಿ. ಕೆ. ಅಯ್ಯಂಗಾರ್ ರಸ್ತೆಗೆ ಮೊದಲು ೩ ಲಕ್ಷ ರೂಪಾಯಿ ಅಂದಾಜು ಮಾಡಿದರು. ಆದರೆ ಅದು ಪೂರ್ತಿ ಆಗುವ ಕಾಲಕ್ಕೆ ೨೯ ಲಕ್ಷ ರೂಪಾಯಿ ಆಯಿತು. ಇಂಥ ಸ್ಕೀಂಗಳನ್ನು ತೆಗೆದುಕೊಳ್ಳುವಾಗ ಆದಷ್ಟು ತೀವ್ರಗತಿಯಿಂದ ಮುಗಿಸುವ ಸಲುವಾಗಿ ಎಲ್. ಐ. ಸಿ ಯಿಂದಲೋ ಅಥವಾ ಬೇರೆ ಎಲ್ಲಿಂದಲಾದರೂ ಸಾಲವನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಹಾಗೆ ಮಾಡದೇ ಹೋದ ಪಕ್ಷದಲ್ಲಿ ಒಂದಕ್ಕೆ ಎರಡಷ್ಟು ಖರ್ಚು ಬರುತ್ತದೆ ಇದರಿಂದ ಯಾರಿಗೆ ಅನುಕೂಲವನ್ನು ಮಾಡಬೇಕೆಂದು ಇರುತ್ತೀರಿ ಅದು ಸಾಧ್ಯವಾಗದೇ ಹೋಗುತ್ತದೆಂದು ಹೇಳ ಬಯಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಟ್ರಸ್ಟ್‌ಬೋರ್ಡ್ ಮತ್ತು ಮುನಿಸಿಪಾಲಿಟಿಗಳಿಗೆ ಒಬ್ಬರಿಗೊಬ್ಬರಿಗೆ ಕ್ಲಾಷ್ ಬರಬಹುದು If there is a clash between the Trust Board and Local authorities, the Government may intervene and the descion of the Government is final ಎಂದು ಇದೆ. ಆದರೂ ಕೂಡ ರೆಸಲ್ಯೂಷನ್ ಮಾಡುವಾಗ ಟ್ರಸ್‌ಬೋರ್ಡ್‌ನವರೂ ಮತ್ತು ಲೋಕಲ್ ಅಥಾರಿಟಿಯವರೂ ಪರಸ್ಪರ ಹೊಂದಿಕೊಂಡು ಹೋಗಲು ಪ್ರಯತ್ನ ಮಾಡಬೇಕು. ಟ್ರಸ್ಟ್‌ಬೋರ್ಡ್‌ನಲ್ಲಿ ಅನೇಕ ಸಿವಿಕ್ ಅಮಿನಿಟೀಸನ್ನು ಮಾಡಿರುವ ಪ್ರಸಂಗಗಳು ಇವೆ. ಕಾರ್ಪೊರೇಷನ್‌ನವರು ಪಾರ್ಕ್‌ಗಳಿಗೋಸ್ಕರ ಇಟ್ಟುಕೊಂಡಿದ್ದಂಥ ಜಾಗಗಳನ್ನು ಬೇರೆಯವರಿಗೆ ಮಾರಿರುವಂತಹ ಪ್ರಸಂಗಗಳು ಅನೇಕವಿವೆ. ಆದುದರಿಂದ ಇದರ ಬಗ್ಗೆ ಸಾಕಷ್ಟು ಎಚ್ಚರಿಕೆಯನ್ನು ತಾವು ವಹಿಸದೇ ಹೋದರೆ ನೀವು ಏನು ಅನುಕೂಲಗಳನ್ನು ನಾಗರೀಕರಿಗೆ ಒದಗಿಸಿಕೊಡಬೇಕೆಂದು ಯೋಜಿಸುತ್ತಿದ್ದೀರಿ ಅದು ಸಾಧ್ಯವಾಗದೇ ಹೋಗುತ್ತದೆ. ಇವತ್ತು ಖಾಸಗೀ ಲೇಔಟ್‌ಗಳು ದಿನೇದಿನೇ ಜಾಸ್ತಿಯಾಗುತ್ತದೆ. ಆದುದರಿಂದ ಈ ಖಾಸಗೀಯವರೂ ಲೇಔಟ್‌ಗಳನ್ನು ಮಾಡುವ ಅಧಿಕಾರವನ್ನು ಕಿತ್ತುಹಾಕಬೇಕೆಂದು ಹೇಳುತ್ತೇನೆ. ಹಾಗೇನಾದರೂ ಮಾಡುವುದಾದರೆ ಟ್ರಸ್ಟ್ ಬೋರ್ಡ್‌ನವರ ಪರ್ಮಿಷನ್ ತೆಗೆದುಕೊಂಡು ಖಾಸಗಿ ಲೇಔಟ್ ಮಾಡಿಡಬೇಕು. ಇವರು ಲೇಔಟ್ ಮಾಡಿ ಮಾರುವುದರಿಂದ ಬಹಳ ಹೆಚ್ಚಿನ ರೀತಿಯಲ್ಲಿ ಲಾಭವನ್ನು ಸಂಪಾದಿಸುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಒಂದು ಸೊಸೈಟಿಯವರು ಚದರ ಗಜ ೧ಕ್ಕೆ ಒಂದು ರೂಪಾಯಿಯಂತೆ ಕೊಂಡುಕೊಂಡು ೨೬ ರೂಪಾಯಿಯಂತೆ ಮಾರಿದ್ದಾರೆ. ಇದರಿಂದ ಅವರಿಗೆ ಎಷ್ಟು ಲಾಭವಾಗಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇವರು. ಟ್ರಸ್ಟ್‌ಬೋರ್ಡ್‌ನಿಂದ ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಖಾಸಗಿಯವರು ಲೇಔಟ್ ಮಾಡುವ ಅಧಿಕಾರವನ್ನು ಕಿತ್ತುಹಾಕಿ ಅದನ್ನು ಟ್ರಸ್ಟ್‌ಬೋರ್ಡ್‌ನವರಿಗೆ ವಹಿಸಬೇಕೆಂದು ಹೇಳುತ್ತೇನೆ. ಇದು ಅವರಿಗಳಿಗೆ ಬರಬೇಕಾದ ಆದಾಯ ಯಾವಾಗ ಬೆಲೆ ಜಾಸ್ತಿಯಾಗುತ್ತದೆ. ಆಗ ಬೆಟರ್‌ಮೆಂಟ್ ಲೆವಿಯನ್ನು ಹಾಕಬೇಕೆಂದು ಸೂಚಿಸಬಯಸುತ್ತೇನೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಇನ್ನೊಂದು ಹೇಳಬೇಕೆಂದರೆ ಇವತ್ತು

ಪಂಗಳೂರು ಬೆಂಗಳೂರು ಆಗುತ್ತಾ ಇದೆ. ಅಲ್ಲಿ ದೊಡ್ಡ ಮೇಜರ್ ಪೋರ್ಟ್ ಇದೆ. ದೊಡ್ಡ ಫರ್ಟಿಲೈಸರ್ ಫ್ಯಾಕ್ಟರಿ ಇದೆ. ಪಟ್ಟಣ ದಿನೇದಿನೇ ದೊಡ್ಡದಾಗಿ ಬೆಳೆಯುತ್ತಿದೆ. ಆದುದರಿಂದ ಎಲ್ಲಿ ಪಟ್ಟಣ ದೊಡ್ಡದಾಗಿ ಬೆಳೆಯಂತ್ತದೆ ಅಂಥಾಕಡೆ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ಬೆಟರ್‌ಮೆಂಟ್ ಲೆವಿಯನ್ನು ಡಿಕ್ಸ್ ಮಾಡಬೇಕೆಂದು ಹೇಳಬಯಂಸುತ್ತೇನೆ.

ಶ್ರೀ ಟಿ.ಆರ್. ಶಾಮಣ್ಣ.—ನಾಲ್ಕು ಐದು ಲೇ ಔಟ್‌ಗಳನ್ನು ಮಾಡಿ ಟ್ರಸ್ಟ್‌ಬೋರ್ಡ್ ನವರು ಜಾಗಗಳನ್ನು ಹಂಚಿಬಿಟ್ಟರು. ಅದು ಹಂಚಿದಮೇಲೆ ಏನು ಆಯಿತು ಎಂದರೆ ಬೆಂಗಳೂರು ನಗರದಲ್ಲಿ ಮೊದಲಿದ್ದ ಪಾಪ್ಯುಲೇಷನ್ ಅಂದರೆ 9–10 ಅದಕ್ಕಿಂತ ಜಾಸ್ತಿಯಾದ್ದರಿಂದ, ಮತ್ತು ಬೆಂಗಳೂರು ನಗರಕ್ಕೆ ಹೇರಳವಾಗಿ ಬರುತ್ತಾ ಇರತಕ್ಕಂತ ಜನಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿಬಂತು. ಆದುದರಿಂದ ಕಾವೇರಿ ಸ್ಕೀಮನ್ನು ತೆಗೆದುಕೊಳ್ಳಬೇಕಾಗಿಬಂತು ಲೇಔಟ್ ಚಾರ್ಜಸ್, ಬೆಟರ್‌ಮೆಂಟ್ ಚಾರ್ಜಸ್ ನಿಗದಿ ಮಾಡುವಾಗ ಮುಂದೆ ಲೇಔಟ್ ಲೆಕ್ಕ ಇಟ್ಟುಕೊಳ್ಳದೆ ಮಾಡುವಂತೆ ಆಗಬೇಕೆಂದೂ, ನೇರವಾಗಿ ಈ ವ್ಯವಸ್ಥೆಯನ್ನು ವಾಟರ್ ಸಿಪ್ಲಿರೇಜ್ ಬೋರ್ಡ್‌ನವರು ಇದನ್ನು ವಹಿಸಿಕೊಳ್ಳಬೇಕಾಗುತ್ತದೆ ಎಂದೂ, ಇದನ್ನು ಗಮನದಲ್ಲಿಟ್ಟುಕೊಂಡು ಮಾಡುವುದಕ್ಕೆ ಸ್ವಲ್ಪ ದುಡ್ಡನ್ನು ರಿಸರ್ವ್ ಫಂಡಿದಿಂದ ಸೇರಿಸಿಕೊಳ್ಳದೇ ಹೋದಪಕ್ಷದಲ್ಲಿ ಮುಂದೆ ಬಹಳ ಕಷ್ಟವಿರುತ್ತದೆಂದು ಹೇಳಿದ್ದಾಯಿತು. ಇದರಿಂದ ಬೆಂಗಳೂರು ಜನರ ಜೂತೆಗೆ ಸೇರಿಕೊಂಡಿದ್ದರಿಂದ ಈಗಿರತಕ್ಕ ಟ್ಯಾಕ್ಸ್‌ಗಿಂತ ಹೆಚ್ಚಿನ ಟ್ಯಾಕ್ಸ್ ಕೊಡಬೇಕಾದ ಪ್ರಸಂಗ ಬಂತು. ಆದ್ದರಿಂದ ಲೇಔಟ್ ಚಾರ್ಜಸ್ ಬೆಟರ್‌ಮೆಂಟ್ ಚಾರ್ಜಸ್‌ನ್ನು ನಿಗದಿ ಮಾಡುವಾಗ ಸ್ವಲ್ಪ ರಿಸರ್ವ್ ಪ್ಲಾನ್‌ನಿಂದ ಮಾಡಬೇಕಾಗುತ್ತದೆ. ಕಾವೇರಿ ಸ್ಕೀಮ್‌ನ ಎಸ್ಟಿಮೆಂಟ್ ಆಗಾಡಿದಾಗ ಸುಮಾರು 60 ಮಿಲಿಯನ್ ಗ್ಯಾಲನ್ ನೀರನ್ನು ಸರಬರಾಜು ಮಾಡಲು 30 ಕೋಟಿ ರೂಪಾಯಿಗಳು ಆಗುತ್ತದೆ ಎಂದು ಲೆಕ್ಕಹಾಕಿದರು. ಈಗ ಅರ್ಧ ಹೆಚ್ಚುಕಡಿಮೆ ಜೋಟರ್ ಕಾಸ್ಟ್ ಆಗಿರುವುದನ್ನು ನೋಡಿದ್ದೇವೆ. ಆದುದರಿಂದ ತಾವು ಇದರ ಬಗ್ಗೆ ಯೋಚನೆ ಮಾಡುವಾಗ ಮುಂದಿನ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ಡೆವಲಪ್‌ಮೆಂಟ್ ಅತಾರಿಟಿ ಬಗ್ಗೆ ನಾನು ಮಾತನಾಡುತ್ತಾ ಅವರು ಸೈಟುಗಳನ್ನು ಹೊಸದಾಗಿ ಕೊಂಡುಕೊಳ್ಳುವಾಗ ಸಾಧಾರಣವಾಗಿ ಅನೇಕ ಕಡೆ ಏನಾಗಿದೆ ಎಂದರೆ.

"The Board not to sell or otherwise dispose of sites in certain cases. The Board shall not sell or otherwise dispose of any site for the purpose of constructing buildings thereon for the accommodation of persons until all the improvements specified in Section 20 have been substantially provided for" ಎಂದು ಇದೆ. ಎಂದರೆ ಭೂಮಿಯನ್ನು ಅಕ್ವೈರ್ ಮಾಡುವಾಗ ಅದನ್ನು ನೇರವಾಗಿ ತಾವೇ ಅಕ್ವೈರ್ ಮಾಡತಕ್ಕಂಥದ್ದು ಉತ್ತಮವೆಂದು ಹೇಳುತ್ತೇನೆ. ಏತಕ್ಕೆಂದರೆ ಮಧ್ಯೆ ಏಜೆಂಟರುಗಳು ಕೊಂಡುಕೊಂಡ ಸೈಟುಗಳನ್ನು ತೆಗೆದುಕೊಳ್ಳಲು ಅವರು ಒಮ್ಮೆ 10 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಭೂಮಿಯನ್ನು ಕೊಂಡುಕೊಂಡು ಬೋರ್ಡ್‌ನವರಿಗಾಗಿ ಅಗಲ ಟ್ರಸ್ಟ್ ಬೋರ್ಡಿನವರಿಗೆ 15 ಸಾವಿರ ರೂಪಾಯಿಗಳಿಂದ 20 ಸಾವಿರ ರೂಪಾಯಿಗಳವರೆಗೆ ಮಾರಾಟ ಮಾರಾಟಮಾಡಿರುವ ಅನೇಕ ನಿದರ್ಶನಗಳಿವೆ ಆದ್ದರಿಂದ ಈ ಮಧ್ಯಸ್ಥರು ಅಂದರೆ ದಲ್ಲಾಳಿಗಳ ಮುಖಾಂತರ ತೆಗೆದುಕೊಳ್ಳುವ ಬದಲು ತಾವೇ ಲಗ್ಯಂಡೆ ಅಕ್ವೈರ್ ಮಾಡಿ ತೆಗೆದುಕೊಳ್ಳುವುದು ಉತ್ತಮವೆಂದು ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ

ಇನ್ನು ಟ್ರಸ್ಟ್‌ಬೋರ್ಡಿನವರ ಮತ್ತು ಹೌಸಿಂಗ್ ಬೋರ್ಡಿನವರು ತಯಾರು ಮಾಡುವ ಪ್ರತಿಯೊಂದು ಎಸ್ಟಿಮೇಟ್‌ಗಳು ಕೂಡ ಗೌವರ್ನಮೆಂಟಿಗೆ ಬರಬೇಕು ಎಂದು ಇದೆ. ಅನೇಕ ಸಲ ಗೌವರ್ನಮೆಂಟಿಗೆ ಬಂದ ಎಸ್ಟಿಮೇಟ್‌ಗಳು ಕೊಳೆತು ನಿಧಾನವಾಗಿ ಆ ಕೆಲಸ ಒಂದಕ್ಕೆ ಎರಡಾಗಿ ರಿವೈಸ್ಡ್ ಎಸ್ಟಿಮೇಟ್ ಮಾಡುತ್ತಾರೆ. ಎಸ್ಟಿಮೇಟ್‌ಗಳು ಬಂದರೆ ಸಗದಿಯಾದ ಕಾಲದಲ್ಲಿ ಅಪ್ರೂ ಮಾಡಬೇಕು. ಮತ್ತೆ ಅವರೇ ತೆಗೆದುಕೊಳ್ಳಬೇಕೇ ಎನ್ನುವುದನ್ನೂ ಕೂಡ ಯೋಚನೆ ಮಾಡಬೇಕು. ಸರ್ಕಾರದವರು ಮುನಿಸಿಪಲ್ ಅಡ್ಮಿನಿಸ್ಟ್ರೇಟಿವ್ ಡಿಪಾರ್ಟ್‌ಮೆಂಟಿಗೆ ಇನ್ನು

ಮೇಲೆ ಹೆಚ್ಚುಹೆಚ್ಚು ಕರಭಾರವನ್ನು ಇಟ್ಟುಕೊಂಡು ಅನೇಕ ನಂದರ್ಭದಲ್ಲಿ ಎಸ್ಟಿಮೇಟನ್ನು ಸ್ಯಾಂಕನ್ ತೆಗೆದುಕೊಳ್ಳುವುದು ನಿಧಾನವಾಗುವುದರಿಂದ ಎಸ್ಟಿಮೇಟನ್ನು ರೀಚೆಂಡರ್ ಮಾಡ ಬೇಕಾದ ಪರಿಸ್ಥಿತಿಯು ಬರುತ್ತದೆ. ಆದ್ದರಿಂದ ಎಸ್ಟಿಮೇಟನ್ನು ತಕ್ಷಣ ಸ್ಯಾಂಕ್ಷನ್ ನಾಡಬೇಕೆಂದು ಹೇಳುತ್ತೇನೆ.

ಇನ್ನು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ ಬೋರ್ಡ್‌ನವರು ಮಾಡಿರತಕ್ಕಂಥ ಕೆಲಸಗಳನ್ನು ಬೇರೆಬೇರೆ ಡಿಪಾರ್ಟ್‌ಮೆಂಟ್‌ಗಳು ನಮಗೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾ ಇವೆ, ಎಷ್ಟೆಷ್ಟು ಖರ್ಚುಮಾಡುತ್ತಿದೆ ಎನ್ನುವುದರ ಬಗ್ಗೆ ಒಂದು ರೀಪೋರ್ಟ್ ಅಸೆಂಬ್ಲಿಯ ಮುಂದೆ ಇಟ್ಟರೀತಿಯಲ್ಲಿ ಇವರು ಕೂಡ ರಿಪೋರ್ಟ್‌ನ್ನು ಅಸೆಂಬ್ಲಿಯ ಮುಂದೆ ಇಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ ಎನ್ನುವ ವಿಷಯವನ್ನು ಕೂಡ ಈ ನಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇವೆ.

ಆಡಿಟ್ ಮತ್ತು ಅಕೌಂಟ್‌ಗಳ ಬಗ್ಗೆ ಹೇಳುವುದಾದರೆ ಬೆಂಗಳೂರು ನಗರದ ಕಾರ್ಪೋರೇಷನ್‌ನದಲ್ಲಿ ಐದು ಆರು ವರ್ಷಗಳಿಂದ ಆಡಿಟ್ ಆಗಿಲ್ಲ. ಟ್ರಸ್ಟ್‌ಬೋರ್ಡಿನಲ್ಲಿ ಆಡಿಟ್ ಆಗಿ ಅನೇಕ ಅಕ್ರಮಗಳು ಮಾಡಿರತಕ್ಕಂಥವ್ಯ ರಿಪೋರ್ಟಿನಲ್ಲಿ ಕಂಡುಬಂದಿದೆ. ಆದುದರಿಂದ ಇಲ್ಲಿಯೂ ಹಾಗಾಗ ಬಾರದೆಂದು ರಿಪೋರ್ಟ್ ಎಷ್ಟು ದಿವಸದ ಒಳಗೆ ರೆಡಿಯಾಗುತ್ತದೆಂಬುದನ್ನು ಯೋಚನೆ ಮಾಡಬೇಕು.

ಈಗ ನಗರದಲ್ಲಿ ಟ್ರಸ್ಟ್‌ಬೋರ್ಡಿನಂತೆ ಅನೇಕ ಹೊಸಹೊಸ ಬೋರ್ಡುಗಳು ಆಗುತ್ತಾ ಇವೆ. ಆದುರಿಂದ ತಾವು ಒಂದು ಕಾಮನ್ ಲೋಕಲ್‌ಬಾಡಿಸ್ ಆಕ್ಟನ್ನು ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಹೊಸದಾಗಿ ಅನೇಕ ಕಾರ್ಪೊರೇಷನ್‌ಗಳು ಕೂಡ ರಚನೆಯಾಗಿದೆ. ಅಪಾಯಿಂಟ್ ನಾಡುವಾಗ ಮುನಿಸಿಪಾಲಿಟಿಗಳಿಗೂ ಅನ್ವಯವಾಗುವಂತೆ ಕಾಮನ್ ಕೇಡರ್‌ಗಳನ್ನು ಮಾಡಲು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಲೋಕಲ್ ಬಾಡೀಸ್ ಕಾಮನ್ ಕೇಡರ್ ಮಾಡುವಾಗ ಟ್ರಸ್ಟ್‌ಬೋರ್ಡಿಗೂ ಅನ್ವಯಿಸಿದರೆ ಅನುಕೂಲವಾಗುತ್ತದೆ. ಇದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುವ ಕ್ರಮವನ್ನು ಅನುಸರಿಸಿ ರಿಕ್ರೂಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕಾಮನ್ ಕೇಡರ್ ಮಾಡತಕ್ಕಂತ ಲೋಕಲ್ ಬಾಡಿಸ್ ಸ್ಕೀಮ್ ಏನು ಇದೆ ಆ ಸ್ಕೀಮ್‌ನಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಲ್ಲವನ್ನು ಸೇರಿಸಿ ಒಂದು ಲೋಕಲ್ ಬಾಡಿಸ್ ಅಡ್ಮಿನಿಸ್ಟ್ರೇಟಿವ್ ನಂಹಿಂದಪಟ್ಟಹಾಗೆ ಎಲ್ಲ ವಿಚಾರಗಳನ್ನು ಸೇರಿಸಿಕೊಂಡು ಒಂದೇ ಕೇಡರ್ ಮಾಡುವುದರಿಂದ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೊನೆಯದಾಗಿ ಬೆಂಗಳೂರು ಡೆವಲಪ್‌ಮೆಂಟ್ ಅತಾರಿಟಿಬಿಲ್ ಪ್ರತ್ಯೇಕವಾಗಿ ಬರುವುದರಿಂದ ಆ ನಂದರ್ಭದಲ್ಲಿ ಹೆಚ್ಚಿಗೆ ಹೇಳಲು ಅನುಕೂಲವಾಗುತ್ತದೆಂದು ಈಗ ಹೆಚ್ಚಿಗೆ ಹೇಳಲು ಇಚ್ಛೆಪಡದೆ ಇದರಲ್ಲಿ ಇಷ್ಟು ಮಾತ್ರ ಹೇಳಬಲ್ಲೆ. ಸರಿಯಾದ ರೀತಿಯಲ್ಲಿ ಸಮಗ್ರವಾದ ರೀತಿಯಲ್ಲಿ ತೆಗೆದುಕೊಂಡ ಪಕ್ಷದಲ್ಲಿ ಇದಕ್ಕೆ ಮೊದಲನೆ ಅಸ್ತಿಭಾರ ಹಾಕಿದಂತಾಗುತ್ತದೆ. ತಮಗೆ ತಿಳಿದ ಹಾಗೆ ಒಂದು ವಿಶಾಲವಾದಂಥ ಪ್ಲಾನ್ ಇಟ್ಟುಕೊಂಡು ಮುಖ್ಯವಾಗಿ ಇಂತಿಂಥ ಕಡೆಗಳಲ್ಲಿ ಇಂತಿಂಥ ಕೆಲಸಗಳು ಆಗಬೇಕು ಎನ್ನುವ ಯೋಜನೆಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ —(ಸಾಗರ) ಸನ್‌ಮಾನ್ಯ ಅಧ್ಯಕ್ಷರೆ ಮಾನ್ಯ ಪೌರಾಡಳಿತ ಸಚಿವರು ಕರ್ನಾಟಕ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಎನ್ನತಕ್ಕಂಥ ಒಂದು ಮಸೂದೆಯನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಅವರು ಈ ಮಸೂದೆಯನ್ನು ಮಂಡಿಸತಕ್ಕಂಥ ಕಾಲದಲ್ಲಿ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ದೊಡ್ಡನಗರಗಳು ಅಂದರೆ, ಧಾರವಾಡ, ಹುಬ್ಬಳ್ಳಿ, ಬೆಳಗಾಂ, ಬಳ್ಳಾರಿ, ಬಿಜಾಪುರ, ದಾವಣಗೆರೆ ಶಿವಮೊಗ್ಗ, ಇವೇ ಮುಂತಾದ ದೊಡ್ಡ ದೊಡ್ಡ ನಗರಗಳು ಬೆಳೆಯತಕ್ಕಂಥ ರೀತಿಯನ್ನು ನೋಡಿದರೆ ಅವುಗಳು ವ್ಯವಸ್ಥಿತವಾದ ರೀತಿಯಲ್ಲಿ ಇಮವರೆಗೂ ಬೆಳೆಯುತ್ತಿಲ್ಲವೆಂಮ ಹೇಳಬಹುದು. ಅವುಗಳನ್ನು ಇನ್ನುಮೇಲಾದರೂ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಬೆಳಸಬೇಕೆಂದು ನನ್ನ ಕಲಹೆಯನ್ನು ವ್ಯಕ್ತಪಡಿಸುತ್ತೇನೆ. ಹಾಗೆಯೇ ನಮ್ಮ ಪ್ರಧಾನ ಮಂತ್ರಿಗಳು ಯೋಜಿಸಿರುವ ೨೦ ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ಕೊಡಬೇಕಾದರೆ ತಾವು ಇಂಥ ದೊಡ್ಡನಗರಗಳಿಗೆ ಬೋರ್ಡ್‌ಗಳನ್ನು ರಚನೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದಿರಿ.

5-00 P. M.

ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒಂದು ಮೂಲಭೂತವಾದಂಥ ಪ್ರಶ್ನೆಯನ್ನು ಕೇಳಬೇಕಾಗಿದೆ, ಏನೆಂದರೆ, ಈ ಬೋರ್ಡ್‌ಗಳಿಂದ ಏನೇನು ಕೆಲಸಗಳಾಬೇಕೆಂದು ನಿರೀಕ್ಷೆ ಮಾಡಿದ್ದೀರೋ ಆ ಕೆಲಸಗಳೆನ್ನೆಲ್ಲಾ ಆಲ್ಡರ್‌ಮನ್ ಸ್ಥಳೀಯ ಸಂಸ್ಥೆಗಳಿಂದಲೇ ಮಾಡಿಸುವುದಕ್ಕೆ ಸಾಧ್ಯವಿಲ್ಲವೇ ಎಂದು? ಆ ರೀತಿ ಸಾಧ್ಯವಿರಬೇಕಾದರೆ ಮತ್ತೆ ಈ ರೀತಿ ಹೊಸದಾಗಿ ಬೋರ್ಡ್‌ಗಳನ್ನು ರಚನೆ ಮಾಡುವುದರ ಮೂಲಕ ಸರ್ಕಾರದ ಭಂಡಾರಕ್ಕೆ ಹೆಚ್ಚು ಖರ್ಚು ಬರುವುದಕ್ಕೆ ಆಸ್ಪದ ಕೊಡುತ್ತಿರುವುದು ಸರಿಯೇ ಎಂದು ಕೇಳುತ್ತಿದ್ದೇನೆ. ಈಗ ಸರ್ಕಾರದವರು ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಲು ಹೊರಟಿದ್ದಾರೆ. ಅದರ ಒಗ್ಗೆ ಒಂದು ಹೆಚ್ಚಿನ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ. ಆ ೨೦ ಅಂಶಗಳಲ್ಲಿ ಸಾರ್ವಜನಿಕವಾಗಿ ಆಗತಕ್ಕಂಥ ಖರ್ಚನ್ನು ಮಿತವ್ಯಯ ಮಾಡುವುದೂ ಸಹ ಸೇರಿದೆ. ಎಲ್ಲಿ ಅನಾವಶ್ಯಕವಾಗಿ ಖರ್ಚುಗಳಾಗುತ್ತವೆ, ಅಂತಹ ಕಡೆಗಳಲ್ಲಿ ಅದನ್ನು ಕಡಿಮೆ ಮಾಡುವುದೂ ಈ ೨೦ ಅಂಶದ ಕಾರ್ಯಕ್ರಮಗಳಲ್ಲಿ ಒಂದಾಗಿದೆ, ಆ ರೀತಿ ಇದ್ದರೂ ಸಹ ಈ ಬೋರ್ಡುಗಳನ್ನು ಹೊಸದಾಗಿ ರಚನೆ ಮಾಡುತ್ತಿರುವುದು ಎಂದು ತಮ್ಮನ್ನು ಕೇಳುತ್ತೇನೆ. ಈ ಬೋರ್ಡುಗಳನ್ನು ರಚನೆ ಮಾಡಿದಮೇಲೆ ಅದಕ್ಕೆ ಆಗತಕ್ಕಂಥ ಖರ್ಚನ್ನು ನಿರ್ವಹಣೆ ಮಾಡಲು ಜನರ ಮೇಲೆ ಮತ್ತೆ ತೆರಿಗೆ ಜಾಸ್ತಿ ಹಾಕಬೇಕಾಗಿ ಬರುತ್ತದೆ. ಈಗಾಗಲೇ ಜನರ ಮೇಲೆ ಹೆಚ್ಚಿನ ತೆರಿಗೆ ಭಾರ ಬಿದ್ದಿದೆ. ಅದರ ಜೊತೆಗೆ ಇನ್ನೂ ಹೆಚ್ಚಿನ ತೆರಿಗೆ ಕೊಡಬೇಕಾಗಿ ಬರುತ್ತದೆ. ಆದ ಕಾರಣ ಈ ಒಂದು ಅನಾವಶ್ಯಕವಾದಂಥ ಖರ್ಚನ್ನು ತಪ್ಪಿಸಲು, ಈಗ ನಗರಸಭೆಗಳು ಏನಿವೆ, ಅವುಗಳ ಮೂಲಕವೇ ಈ ಬೋರ್ಡ್‌ಗಳು ಮಾಡಬೇಕೆಂದಿರುವ ಕೆಲಸಗಳನ್ನು ಮಾಡಿಸುವುದಕ್ಕಾಗುವುದಿಲ್ಲವೇ? ಈಗ ಕೆಲವು ಕಡೆಗಳಲ್ಲಿರುವ ನಗರಸಭೆಗಳಲ್ಲಿ ಚುನಾಯಿತ ಪ್ರತಿನಿಧಿಗಳೇ ಕೆಲಸ ಮಾಡುತ್ತಿದ್ದಾರೆ, ಮತ್ತೆ ಕೆಲವು ಕಡೆಗಳಲ್ಲಿ ಆಡಳಿತಾಧಿಕಾರಿಗಳು ನಗರಸಭೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಇಂತಹ ಕಡೆಗಳಲ್ಲಿ ಆಡಳಿತಾಧಿಕಾರಿಯವರಿಗೆ ಸಹಾಯ ಮಾಡಲು ಯಾರು ನಿಮ್ಮ ಇಪ್ಪತ್ತು ಅಂಶಗಳ ಕಾರ್ಯಕ್ರಮಕ್ಕೆ ಜೋತುಬಿದ್ದಿದ್ದಾರೆ, ಅಂತಹವರಿಗದ ಕೂಡಿದಂತೆ ಅಡ್ವೈಸರಿ ಕಮಿಟಿಗಳನ್ನು ಮಾಡಿದ್ದೀರಿ. ನಿಮ್ಮ ಕಂತ್ರಿಗೆಗೆ ಜೋತುಬಿದ್ದಿರುವವರನ್ನೇ ಅಡ್ವೈಸರಿ ಕಮಿಟಿಗಳಿಗೆ ನೇಮಕ ಮಾಡಿರುವುದರಿಂದ ಅವರುಗಳೇನೂ ನಿಮ್ಮ ಕೆಲಸಗಳಿಗೆ ಅಡ್ಡಗಾಲು ಹಾಕುವುದಕ್ಕೆ ಹೋಗುವುದಿಲ್ಲ; ಆದ ಕಾರಣ ಅವರ ಮೂಲಕವೇ ಈ ಬೋರ್ಡಿನವರು ಮಾಡಬೇಕೆಂದಿರುವ ಕೆಲಸಗಳನ್ನು ಮಾಡಿಸುವುಕ್ಕಾಗುವುದಿವೇ?

ಶ್ರೀ ಎಂ ಬಿ. ರಾಮಸ್ವಾಮಿ.—ನೀವು ಈ ೨೦ ಅಂಶದ ಕಾರ್ಯಕ್ರಮಗಳನ್ನು ಸ್ವಾಗತ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಒಳ್ಳೆಯ ಕಾರ್ಯಕ್ರಮಗಳನ್ನು ಸ್ವಾಗತ ಮಾಡಿದರೂ ಸಹ ಆ ಬಗ್ಗೆ ನಿಮಗೆ ನಮ್ಮಲ್ಲಿ ವಿಶ್ವಾಸ ಬರುವುದಿಲ್ಲ, ಈಗ ಶಿವಮೊಗ್ಗ, ದಾವಣಗೆರೆ ಮತ್ತು ಹುಬ್ಬಳ್ಳಿ ನಗರಸಭೆಗಳಲ್ಲಿ ನಿಮ್ಮವರೇ ಇರುವುದರಿಂದ, ಆ ನಗರಗಳನ್ನು ಸುಂದರವಾಗಿ ಕಟ್ಟುವುದಕ್ಕೆ, ಹೊಸ ಲೇ-ಔಟ್‌ಗಳನ್ನು ಮಾಡಿ ಸೈಟ್‌ಗಳನ್ನು ಹಂಚುವುದಕ್ಕೆ ಇರತಕ್ಕಂಥ ಆತಂಕವಾದರೂ ಏನು? ಈ ಕೆಲಸಗಳನ್ನು ಮಾಡಿಸಲು ಪ್ರತ್ಯೇಕವಾದಂತ ಬೋರ್ಡ್‌ಗಳಾದರೂ ಏತಕ್ಕೆ ಬೇಕು? ನಗರಸಭೆಗಳ ಮೂಲಕವೇ ಈ ಕೆಲಸಗಳನ್ನು ಮಾಡಿಸಲು ಇರತಕ್ಕಂಥ ಅಡೆತಡೆಗಳಾದರೂ ಏನು?

SRI K. PUTTASWAMY.—The City Municipalities have not been able to do this. There is a provision in the City Muncipal Act for taking up city improvement work like lay-out etc. But they have not been able to do it. Therefore the Government have come forward with this proposal.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಪುಟ್ಟಸ್ವಾಮಿಯವರು ಹೇಳುವುದು ಸರಿಯಾಗಿದೆ, ಪುರಸಭೆಗಳಿಗೆ ಸಂಬಂಧಪಟ್ಟಂತೆ ಟೌನ್ ಮುನಿಸಿಪಲ್ ಆಕ್ಟ್ ಎಂಬುದು ಇದೆ, ಆ ಒಂದು ಆಕ್ಟ್ ಪ್ರಕಾರ ಯಾವ ಮುನಿಸಿಪಾಲಿಟಿಗಳು ನಡೆದುಕೊಳ್ಳುವುದಿಲ್ಲವೋ, ಯಾರು ತಪ್ಪಾಗಿ ನಡೆದುಕೊಳ್ಳುತ್ತಾರೋ ಅಂತಹವರ ಮೇಲೆ ಕ್ರಮ ಕೈಕೊಳ್ಳಲು ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರವಿದೆ. ಈಗ ಯಾವ ಯಾವ ಮುನಿಸಿಪಾಲಿಟಿಗಳ ವಾಯಿದೆ ಮುಗಿದಿದೆಯೋ ಅಲ್ಲೆಲ್ಲಾ ಹೊಸದಾಗಿ ಚುನಾವಣೆ ನಡೆಸುವುದಕ್ಕೆ ಬದಲು

ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡುತ್ತಿದ್ದೀರಿ ಮತ್ತು ಅವರ ಸಹಾಯಕ್ಕೆ ಅಡ್ವೈಸರಿ ಕಮಿಟಿಗಳನ್ನು ರಚನೆ ಮಾಡುತ್ತೀದ್ದೀರಿ, ಇಂತಹ ಕಡೆಗಳಲ್ಲಿಯಾದರೂ ಈ ಕೆಲಸಗಳನ್ನು ಮಾಡಿಸಲು ಏನು ತೊಂದರೆ ಇದೆ? ಪ್ರತ್ಯೇಕವಾದ ಬೋರ್ಡಿನ ರಚನೆಯಾದರೂ 'ಏತಕ್ಕೆ ಬೇಕು? ಈಗ ಶಿವಮೊಗ್ಗದಲ್ಲಿ ನಿಮ್ಮ ಸ್ನೇಹಿತರೇ ಇದ್ದಾರೆ ಕಾಂಗ್ರೆಸ್ ಪಕ್ಷದವರೇ ಇದ್ದಾರೆ. ನಿಮ್ಮ ಅಧಿಕಾರಿಗಳೇ ಅಲ್ಲಿ ಕೆಲಸ ಮಾಡುತ್ತಿದ್ದಾರೆ ಅಂತಹ ಕಡೆಯಲ್ಲಿಯಾದರೂ 'ಏತಕ್ಕೆ ಈ ಕೆಲಸಗಳನ್ನು ಮಾಡಿಸಬಾರದು? ಅವರು ಈ ಕೆಲಸ ಮಾಡದಿದ್ದರೆ ಆ ಮುನಿಸಿಪಾಲಿಟಿಗಳನ್ನಾದರೂ 'ಏತಕ್ಕೆ ಇಟ್ಟಿದ್ದೀರಿ? ನೀವು ಹೇಳುವ ಕೆಲಸವನ್ನು ಅವರು ಮಾಡಲಿಲ್ಲವೆಂದರೆ, ಅವರ ಮೇಲೆ ಕ್ರಮ ಕೈಕೊಳ್ಳಲು ಕಾನೂನು ಪ್ರಕಾರ ನಿಮಗೆ ಸಂಪೂರ್ಣ ಅಧಿಕಾರ ವಿದೆ. ಆ ಒಂದು ಅಧಿಕಾರವನ್ನು ಚಲಾಯಿಸದೆ ಮತ್ತೊಂದು ಬೋರ್ಡನ್ನು ರಚನೆ ಮಾಡುತ್ತಿರುವುದರ ಉದ್ದೇಶವಾದರೂ ಏನು? ಇವೊತ್ತು ಬೆಂಗಳೂರು ನಗರದಲ್ಲಿ ಸಿಟಿ ಕಾರ್ಪೊರೇಷನ್ ಇದೆ ಮತ್ತು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇದೆ. ಅದೇ ತರಹ ಮೈಸೂರು ನಗರದಲ್ಲಿ ಸಹ ಎರಡು ಸಂಸ್ಥೆಗಳ ಮೂಲಕ ಕೆಲಸಗಳಾಗುತ್ತಿವೆ. ಈ ಎರಡು ಸಂಸ್ಥೆಗಳು ಒಂದೇ ರೀತಿಯ ಕಾರ್ಯಭಾರ ನಡೆಸುತ್ತಿರುವುದನ್ನು ನಾವು ಇಂದು ನೋಡುತ್ತಿದ್ದೇವೆ.

SRI K. PUTTASWAMY.—The City Improvement Trust Boards are for improvement of Cities and the City Corporations are for providing other facilities.

SRI KAGODU THIMMAPPA —The funntions of the Improvement Trust Board have been incorporated in the Corporation Act itself. ಕಾರ್ಪೊರೇಷನ್ ಆಕ್ಟ್‌ನಲ್ಲಿ 'ಏನೇನು ಆಬ್ಜೆಟ್ಸ್ ಇವೆಯೋ ಅವೆಲ್ಲಾ ಈ ಬೋರ್ಡಿನ ಆಕ್ಟ್‌ನಲ್ಲಿಯೂ ಸಹ ಇವೆ. ಆದರೂ ಸರ್ಕಾರದವರು ಕೆಲವರಿಗೆ ಸ್ಥಾನಮಾನ ಕೊಡಬೇಕೆಂಬ ದೃಷ್ಟಿಯಿಂದ ಈ ರೀತಿ ಬೋರ್ಡುಗಳನ್ನು ರಚನೆ ಮಾಡುತ್ತಿದ್ದಾರೆ. ಆ ಬೋರ್ಡುಗಳಲ್ಲಿ ತಮಗೆ ಬೇಕಾದವರನ್ನು ತಂದು ಕೂರಿಸಿ ಅವರನ್ನು ಮೇರವಣಿಗೆ ಮಾಡಿಸಬೇಕು ಎಂಬುದಷ್ಟೇ ಇದರ ಉದ್ದೇಶವಾಗಿದೆಯೇ ಹೊರತು, ಬೇರೆ ಇನ್ನೇನೋ ಉದ್ದೇಶ ಸಾಧನೆ ಮಾಡುವಂತಹ ಕಲ್ಪನೆ ಇದರಲ್ಲಿ ಇಲ್ಲ. ಸರ್ಕಾರದ ಹತ್ತಿರ ಹಣ ಇಲ್ಲವೆಂದು ಹೇಳುವಾಗ ಈ ಬೋರ್ಡುಗಳ ರಚನೆಯಾದರೂ ಸಹ 'ಏತಕ್ಕೆ? ಈ ಕೆಲಸಕ್ಕೂ ಮಿಗಿಲಾಗಿ ನೀರಾವರಿ ಯೋಜನೆಗಳ ಕೆಲಸವಾಗಬೇಕಾಗಿದೆ, ರಸ್ತೆಗಳ ಕೆಲಸಗಳಾಗಬೇಕಾಗಿದೆ, ನೀರಾವರಿ ಯೋಜನೆಗಳನ್ನು ಕೈಕೊಂಡರೆ ಅಹಾರ ಪದಾರ್ಥಗಳನ್ನು ಹೆಚ್ಚು ಬೆಳೆಯಬಹುದು, ವಿದ್ಯುತ್ ಯೋಜನೆಗಳನ್ನು ಕೈಕೊಂಡರೆ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅವಕಾಶವಾಗುತ್ತದೆ ಮತ್ತು ಅದರಿಂದ ನಮ್ಮ ಸಂಪತ್ತನ್ನು ವೃದ್ಧಿ ಮಾಡಿಕೊಳ್ಳಲು ಅವಕಾಶವಾಗುತ್ತದೆ, ಆದರೆ ಆ ಕೆಲಸಗಳನ್ನೇ ಶೀಘ್ರವಾಗಿ ಮಾಡಲು ಹಣದ ಕೊರತೆಯಿರುವಾಗ ಈ ಬೋರ್ಡುಗಳ ರಚನೆಯಾದರೂ 'ಏತಕ್ಕೆ ಬೇಕು? ನಗರ ಪ್ರದೇಶಗಳಲ್ಲಿ ಇಂದು ಶೇಕಡಾ ೨೦ರಷ್ಟು ಮಾತ್ರ ಜನರಿದ್ದಾರೆ, ಇವರ ಅನುಕೂಲಕ್ಕಾಗಿ ಹೊಸ ಲೇ-ಔಟ್‌ಗಳನ್ನು ಸಧ್ಯಕ್ಕೆ ಮಾಡದಿದ್ದರೆ ಯಾವ ತೊಂದರೆಯೂ ಆಗುವುದಿಲ್ಲ, ಜೊತೆಗೆ ಈ ಬೋರ್ಡುಗಳನ್ನು ಕೆಲವೇ ಸಿಟಿಗಳಲ್ಲಿ ಮಾತ್ರ ರಚನೆ ಮಾಡುತ್ತಿದ್ದೀರಿ, ಎಲ್ಲಾ ಟೌನ್‌ಗಳಿಗೂ ಇದನ್ನು ವಿಸ್ತಾರ ಮಾಡುತ್ತಿಲ್ಲ ಆದಕಾರಣ ಈ ಬೋರ್ಡುಗಳಿಗೆ ಹಣ ಖರ್ಚು ಮಾಡುವುದಕ್ಕೆ ಬದಲು ಅದೇ ಹಣವನ್ನು ನೀರಾವರಿ ಯೋಜನೆಗಳಿಗೆ ಖರ್ಚು ಮಾಡುವುದು ಒಳ್ಳೆಯದಲ್ಲವೇ?

SRI K. PUTTASWAMY —There will not be any out come of funds from the exchequer. These are all self supporting bodies. Funds will come to them from beneficiaries.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ನಗರಪ್ರದೇಶಗಳಲ್ಲಿ ಶೇಕಡಾ ೧೬ರಷ್ಟು ಪ್ರಮಾಣದಲ್ಲಿ ತೆರಿಗೆಯನ್ನು ಹಾಕಿದ್ದೀರಿ, ಒಂದು ವಾಸದ ಮನೆಯ ಬಾಡಿಗೆ ೧೦೦ ರೂಪಾಯಿಗಳಿದ್ದರೆ, ಆ ಮನೆಯ ಮಾಲೀಕ ವರ್ಷಕ್ಕೆ ೨೦೦ ರೂಪಾಯಿಗಳಷ್ಟು ಕಂದಾಯ ಕೊಡಬೇಕಾಗಿದೆ. ಈಗ ಹೊಸದಾಗಿ ಈ ಬೋರ್ಡ್‌ಗಳನ್ನು ರಚನೆ ಮಾಡಿದ್ದೇ ಆದರೆ, ಕಂದಾಯವೂ ಸಹ ಜಾಸ್ತಿಯಾಗುತ್ತದೆ, ಆ ಒಂದು ಹೆಚ್ಚಿನ ಕರಭಾರ ಜನಸಾಮಾನ್ಯರ ಮೇಲೇ ಬೀಳುತ್ತದೆ.

SRI K. PUTTASWAMY.—If you go and find out the rental value of Sagar and Mysore, then you will be convinced about the utility of the Improvement Trust Board

ಶ್ರೀ ಕಾಗೋಡು ತಿಮ್ಮಪ್ಪ.—ಸಣ್ಣ ಸಣ್ಣ ನಗರಗಳಲ್ಲಿಯೇ ಇಂದು ಮನೆಕಂದಾಯ ಜಾಸ್ತಿಯಾಗಿದೆ ಇನ್ನು ಮೈಸೂರು ಅಥವಾ ಬೆಂಗಳೂರು ತೆಗೆದುಕೊಂಡರೆ ಒಂದಕ್ಕೆ ಎರಡರಷ್ಟು ಜಾಸ್ತಿ ಇರುತ್ತದೆ. ಇದರ ಜೊತೆಗೆ ಸರ್ಕಾರದ ಅಧಿಕಾರಿಗಳು ೫ ವರ್ಷಕ್ಕೆ ಒಂದು ಸಲ ಬಂದು ಮನೆ ಕಂದಾಯವನ್ನು ಪುನರ್ವಿಮರ್ಶೆ ಮಾಡಿ ಸಂಬಂಧಪಟ್ಟ ಮುನಿಸಿಪಾಲಿಟಿಗಳಿಗೆ ವಿವರಗಳನ್ನು ಕೊಡುತ್ತಾರೆ ಆ ರೀತಿ ಮಾಡುವಾಗ ಬೆಂಗಳೂರಿನಲ್ಲಿ ಒಂದು ತರಹ, ಮೈಸೂರಿನಲ್ಲಿ ಒಂದು ತರಹ, ಶಿವಮೊಗ್ಗದಲ್ಲಿ ಒಂದು ತರಹ, ಮಾಡಿದ್ದೆ ಆದರೆ ಸರ್ಕಾರದ ಯಂತ್ರದಲ್ಲಿ ಏನೋ ಲೋಪದೋಷವಿದೆ ಎಂದು ಕಂಡುಬರುತ್ತದೆ. ಕಾನೂನು ಪ್ರಕಾರ 'ಏನು ಇದೆ ರೆಂಟಲ್‌ವ್ಯಾಲ್ಯೂ 'ಏನು ಇದೆ ಅದನ್ನು ನೋಡಿ ಅಸೆಸ್‌ಮೆಂಟ್ ಮಾಡುತ್ತಾರೆ. ಈ ಸ್ಕೀಮ್ ಮತ್ತು ಸ್ಕೇಲ್ ಒಂದೇ ಇದೆ. ಸರ್ಕಾರದ ಯಂತ್ರದಲ್ಲಿ 'ಏನಾದರೂ ಲೋಪದೋಷಗಳು ಇದ್ದರೆ ಅದಕ್ಕೆ 'ಏನುಮಾಡಬೇಕು ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು. ತಾವು ಮಾಡುತ್ತಿರುವುದನ್ನು ನೋಡಿದರೆ ಸರ್ಕಾರದ ಯಂತ್ರದಲ್ಲಿ ಲೋಪದೋಷವನ್ನು ಮುಚ್ಚುವುದಕ್ಕೆ ಇದನ್ನು ಮಾಡುತ್ತಾ ಇದ್ದೀರೆಂದು ತಿಳಿದುಕೊಳ್ಳಬಹುದು. ಇಂಥ ಬೋರ್ಡುಗಳನ್ನು ಮಾಡುವುದು ವಂಹತ್ವ ಸಾಧನೆ ಎಂದು ತಿಳಿದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಂತ್ರಿ ಸರ್ಕಾರದ ಹಣವನ್ನು ಜಾಸ್ತಿ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಪಟ್ಟಣದಲ್ಲಿ ಇರುವವರ ಮೇಲೆ ಇನ್ನಷ್ಟು ತೆರಿಗೆ ಹೇರುವುದಕ್ಕೆ ಇದನ್ನು ಮಾಡುತ್ತಿದ್ದೀರೆಂದು ಹೇಳುತ್ತೇನೆ. ಇದರಿಂದ ತಾವು ರಚನೆ ಮಾಡುತ್ತೀರಿ ಆ ಬೋರ್ಡಿಗೂ ಮತ್ತು ನಗರಸಭೆಗಳಿಗೂ ಪೈಪೋಟಿ ಮಾಡಿದಂತಾಗುತ್ತದೆ ಇವರ ಪೈಪೋಟಿಯಲ್ಲಿ ಆಗಬೇಕಾದಂತಹ ಕೆಲಸ ಕಾರ್ಯಗಳು ನಡೆಯುವುದಿಲ್ಲ. ಇದರಿಂದ ಪಟ್ಟಣಗಳಲ್ಲಿ ಎರಡು ಪಾರ್ಟಿಗಳು ತಲೆಯೆತ್ತುತ್ತವೆ ಅಷ್ಟೆ ಎರಡು ವರ್ಗದವರಿಗೂ ಕಚ್ಚಾಟ ಪ್ರಾರಂಭವಾಗುತ್ತದೆ, ಈ ಕಚ್ಚಾಟದಲ್ಲಿ ತಾವು 'ಏನು ಗುರಿ ಸಾಧನೆ ಮಾಡುವುದಕ್ಕೆ ಹೊರಟಿದ್ದೀರಿ ಅದು ಖಂಡಿತವಾಗಿಯೂ ಸಾಧನೆಯಾಗುವುದಿಲ್ಲವೆಂದು ಹೇಳಬೇಕಾಗುತ್ತದೆ ಇಂತಹ ತುರ್ತುಪರಿಸ್ಥಿತಿ ಕಾಲದಲ್ಲಿ ಪೈಪೋಟಿ ಬೆಳೆಯುವುದು ಸಾಧ್ಯವಾದುದಲ್ಲವೆಂದು ಹೇಳಿ ಆ ದೃಷ್ಟಿಯಿಂದ ಈ ಮಸೂದೆಯನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ.ಎಸ್. ಕೃಷ್ಣನ್.—(ಮಲ್ಲೇಶ್ವರಂ) ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಏನು ತೆಗೆದುಕೊಂಡು ಬಂದಿದ್ದಾರೆ ಇದರ ಬಗ್ಗೆ ಶಂಕೆ ಮತ್ತು ಅನುಮಾನ ವ್ಯಕ್ತಪಡಿಸಬೇಕಾಗಿದೆ. ಮೊದಲನೆಯದು ಇದರ ಅಭಿಪ್ರಾಯ ಒಳ್ಳೆಯದೇ ಅಥವಾ ಕೆಟ್ಟದೇ ಎಂದು ಯೋಚನೆ ಮಾಡುವುದಾದರೆ ಈ ರೀತಿ ನಗರದಲ್ಲಿ ನಗರಾಡಳಿತ ನಡೆಸಬೇಕಾದರೆ ಒಂದು ಬೋರ್ಡನ್ನು ಬೇರೆಯಾಗಿ ರಚನೆ ಮಾಡಿ ಅದಕ್ಕೆ ಕೆಲವು ಅಧಿಕಾರಗಳನ್ನು ಕೊಟ್ಟು ಕ್ರಮವಾದ ಉದ್ದೇಶದಿಂದ ಕೆಲಸ ಕಾರ್ಯಗಳನ್ನು ನಡೆಸುವುದಾದರೆ ಒಳ್ಳೆಯದು ಎಂದು ಹೇಳುತ್ತೇನೆ. ಲೋಕಲ್ ಅಥಾರಿಟಿಯಿಂದ ಜನತೆಗೆ ಆಗಬೇಕಾದ ಅನುಕೂಲಗಳು ಅಂದರೆ ನೀರು, ಒಳಚರಂಡಿ ರಸ್ತೆ ದೀಪ ಮತ್ತು ಇನ್ನು ಅನೇಕ ನಾಗರಿಕತೆಗೆ ಬೇಕಾದ ಸಾವಲತ್ತುಗಳು ದೊರಕುವುದು ನನ್ನ ಅನುಭವದಲ್ಲಿ ಬಹಳ ಕಷ್ಟವಾಗುತ್ತದೆ. ಅದನ್ನೆಲ್ಲಾ ಪೂರೈಸಬೇಕಾದರೆ ಈಗ ಬೆಂಗಳೂರಿನಲ್ಲಿ ಟ್ರಸ್ಟ್‌ಬೋರ್ಡ್ ಹಾಗೂ ಕಾರ್ಪೊರೇಷನ್ ಎರಡೂ ಕೆಲಸ ಮಾಡುತ್ತಿವೆ. ಹಿಂದೆ ಇದ್ದ ಟ್ರಸ್ಟ್‌ಬೋರ್ಡ್‌ನ್ನು ಬೆಂಗಳೂರು ಡೆವಲಪ್‌ಮೆಂಟ್ ಅತಾರಿಟಿಯನ್ನಾಗಿ ಪರಿವರ್ತಿಸಿದ್ದಾರೆ. ಕಾರ್ಪೊರೇಷನ್ ಬಹಳ ದೊಡ್ಡ ಜವಾಬ್ದಾರಿ ವಹಿಸಿ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ರೋಡ್ಸ್, ಲೈಟ್ ವಾಟರ್, ಆರೋಗ್ಯದ ವ್ಯವಸ್ಥೆ ಇವೆಲ್ಲವನ್ನೂ ಓದಗಿಸಬೇಕಾದರೆ ಕಾರ್ಪೋರೇಷನ್‌ಗೆ ಮೊದಲಿನಿಂದಲೂ ಬಹಳ ಸಮಸ್ಯೆಗಳು ಬಂದಿರುತ್ತವೆ. ಆದರಿಂದ ನಮ್ಮ ನಗರದ ಅಭಿವೃದ್ಧಿ ಕುಂಠಿತವಾಯಿತು ಎಂದು ಹೇಳಿದರೆ ತಪ್ಪಾಗಬಾರದು. ಈಗ ಇರುವ ರೀತಿಯಲ್ಲೇ ಬಿಟ್ಟರೆ ನಗರ ಮನಸ್ಸೋ ಇಚ್ಛೆ ಬೆಡ್ಡಾದಿಡ್ಡಿಯಾಗಿ, ಬೇಕಾಬಿಟ್ಟಿಯಾಗಿ ಯಾರು ಹೇಗೆ ಬೇಕಾದರು ಬೆಳೆಸಿಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು. ಟ್ರಸ್ಟ್‌ಬೋರ್ಡ್ ರಚನೆ ಆಯಿತು ಟ್ರಸ್ಟ್‌ಬೋರ್ಡ್ ಬಂದ ನಂತರ ಕೆಲಸಕಾರ್ಯಗಳು ಕ್ರಮವಾಗಿ ನಡೆಯತೊಡಗಿತು. ನಗರವಳ್ಳಿ ನ್ಯಾಯವಾಗಿ ನಿವೇಶನಗಳನ್ನು ಹಂಚಬೇಕು, ಇದು ಮೂಲಭೂತವಾದ ಹಕ್ಕು. ನಗರವನ್ನು ಅಭಿವೃದ್ಧಿ ಮಾಡಬೇಕು. ಈ ಒಂದು ಪ್ರಜಾಪ್ರಭುತ್ವದ ಯುಗದಲ್ಲಿ ಈ ಒಂದು ಬೋರ್ಡಿನ ಕೆಲಸ ಏನು ಇದೆ ಇದನ್ನು

ಈ ಬೋರ್ಡ್ ಮಾಡಬೇಕು ಮತ್ತು ಲೋಕಲ್ ಅಥಾರಿಟಿ ಅಂದರೆ ಮುನಿಸಿಪಾಲಟಿಗೆ ಸಾಮಾನ್ಯವಾಗಿ ಯಾವ ಕೆಲಸ ಇದೆ ಅದನ್ನು ಅವು ಮಾಡಬೇಕು. ಆಯಾ ಕೆಲಸಗಳನ್ನು ಅವು ಮಾಡದೆ ಹೋದರೆ ಅದರಿಂದ ಒಬ್ಬರಿಗೊಬ್ಬರಿಗೆ ತಿಕ್ಕಾಟವಾಗಿ ಅಭಿವೃದ್ಧಿ ಕಾರ್ಯಗಳು ಕುಂಟಿತವಾಗುತ್ತವೆ, ನಾಗರೀಕರಿಗೆ ತೊಂದರೆಯಾಗುತ್ತದೆ. ಉದಾಹರಣೆಗೆ ಬೆಂಗಳೂರು ಬಹಳ ದೊಡ್ಡ ನಗರ. ಈ ನಗರದಲ್ಲಿ ಹಲವಾರು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗದೆ ಇರಬಹುದು. ಸಣ್ಣ ಸಣ್ಣ ಮುನಿಸಿಪಾಲಿಟಿ ಅಂದರೆ ಒಂದು ಲಕ್ಷ ಜನಸಂಖ್ಯೆ ಇದ್ದರೆ ಆಲ್ಲಿ ಹಣದ ಅನುಕೂಲತೆಯೂ ಕಡಿಮೆ ಇರುತ್ತದೆ.ಅದ್ದರಿಂದ ಅನೇಕ ಸಮಸ್ಯೆಗಳು ಬರುತ್ತವೆ. ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಇರಬಹುದು. ಯಾವ ಮುನಿಸಿಪಾಲಟಿಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲ ಆಲ್ಲಿ ಸರ್ಕಾರ ನೇಮಿಸಿದಂತಹ ಜನರು ಎಸು ಇರುತ್ತಾರೆ ಅಲ್ಲ ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸುವುದಿಲ್ಲ. ಅಲ್ಲ ಚುನಾಯಿತ ಪ್ರತಿನಿದಿಗಳು ಇದ್ದರೂ ಕೂಡ ಇಬ್ಬರು ಇರುತ್ತಾರೆಉಳಿದವರನ್ನು ಸರ್ಕಾರ ನೇಮಕ ಮಾಡುವುದರಿಂದ ಅಲ್ಲಿನ ಅಭಿವೃದ್ಧಿ ಕಾರ್ಯಗಣು ನಡೆಯುವುದಕ್ಕೆ ಅನುಕೂಲವಾಗುವುದಿಲ್ಲ ಕಾರಣ ಇವರ ಮೆಜಾರಿಟಿ ಇರುವುದಿಲ್ಲ. ಆದ್ದರಿಂದ ತಮ್ಮ ಬಿಲ್ಲನ್ನು ನೋಡಿದರೆ ಸಣ್ಣ ಸಣ್ಣ ಮುನಿಸಿಪಾಲಟಿಗಳು ಮಾಡುವ ಅಧಿಕಾರವನ್ನು ಇದಕ್ಕೆ ಕೊಟ್ಟಿರುವ ಭಾಗೆ ಕಾಣುತ್ತದೆ. ಇದನ್ನು ಮಾಡುವುದಕ್ಕೆ ಚಾಪ್ಟರ್ ೫ರಲ್ಲಿ 14 ಎಬಿಸಿಡಿ ಇನ್ನು ಮುಂತಾದ ಕಾಲುಮ್‌ಗಳು ಇವೆ, ಅವನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಲೇಯಿಂಗ್ ಅಥವಾ ರೀಲೇಯಿಂಗ್ ಪರ್ಮೇಷನ್ ಸಿಟಿ ರೈಸಿಂಗ್ ಎಕ್ಷಟೆನ್, ಡ್ರೈನೇಜ್ ಓಪನ್ ವೆಂಟಲೇಷನ್ ಮಾರ್ಕೆಟ್, ತಿಯೇಟರ್ ಹೀಗೆ ಬೇಕಾದಷ್ಟು ಇವೆ ಎಲ್ಲವನ್ನೂ ಸಮಗ್ರವಾದಿ ಮುನಿಸಿಪಾಲಟಿಗಳು ಮಾಡಬೇಕು, ಇದು ಕಾನೂನಿನಲ್ಲಿ ಇದೆ. ಚುನಾಯಿತ ಪ್ರತಿನಿಧಿಗಳು ನಿರ್ವಹಿಸುತ್ತಿದ್ದ ಕಾರ್ಯವನ್ನು ತಪ್ಪಿಸುವುದಕ್ಕೆ ಇದನ್ನು ಮಾಡಿದಂತಾಗುತ್ತದೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ಅಂಶವನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಯಾವುದೇ ಸಂಸ್ಥೆಯನ್ನು ಕಾನ್ಸ್‌ಟ್ಯೂಟ್ ಮಾಡಿದರೂ ಅಲ್ಲಿ ಚುನಾಯಿತ ಪ್ರತಿನಿಧಿಗಳು ಇಬ್ಬರು ಮಾತ್ರ ಇರುತ್ತಾರೆ. ಅದೆಲ್ಲಿ ಯಾರನ್ನು ಬೇಕಾದರೂ ಹಾಕಬಹುದು. ಒಂದು ಬೋರ್ಡನ್ನು ಕಾನ್ಸ್‌ಟ್ಯೂಟ್ ಮಾಡಿ ನಮ್ಮ ಪಕ್ಷದವರನ್ನು ಹಾಕಿ ಅದರ ಕೆಲಸವನನ್ನು ನಡೆಸುವುದಕ್ಕೆ ಬಿಟ್ಟರೆ ಅಲ್ಲಿ ಸರಿಯಾಗಿ ಕೆಲಸ ನಡೆಯುವುದಿಲ್ಲ, ಪ್ರಜಾಪ್ರಭುತ್ವಕ್ಕೆ ಹೆಚ್ಚು ಮನ್ನಣೆ ಕೊಡುವುದಾದರೆ ಹೆಚ್ಚು ಚುನಾಯಿತ ಪ್ರತಿನಿಧಿಗಳನ್ನು ಮುಂದೆ ತಂದು ಅವರಿಗೆ ಕೆಲಸಕಾರ್ಯಗಳನ್ನು ಮಾಡುವುವಕ್ಕೆ ಹೆಚ್ಚು ಅವಕಾಶ ಮಾಡಿಕೊಡಬೇಕು ಹಾಗೆ ಮಾಡಿ ಕೊಡದೆ ಹೋದರೆ ತಾವು ಪ್ರಜಾಪ್ರಭುತ್ವಕ್ಕೆ ಏನು ಬೆರೆ ಕೊಟ್ಟಂತಾಗುತ್ತದೆ? ಎಲ್ಲ ಹೋದರೂ ಆಡ್ಮಿನಿಸ್ಟ್ರೇಟರ್ ನೇಮಕ ಮಾಡುತ್ತೀರಿ. ಈ ಒಂದು ಸಂದರ್ಭದಲ್ಲಿ ಹೇಳುವುದಾದರೆ ಈ ನಿಮ್ಮ ಬಿಲ್ಲನಲ್ಲಿ ಮುಖ್ಯವಾಗಿ ಇರುವುದು ಏನು ಎಂದರೆ ಸೆಕ್ಷನ್ 31ರಲ್ಲಿಎಕ್ಷಟನ್ಸನ್ ಮತ್ತು ಲೇಔಟ್ ಪ್ರೊವೈಡ್ ಮಾಡುವುದಕ್ಕೆ ಸಂಬಂಧಪಟ್ಟಂತೆ ಇದೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಯಾವ ತರಹ ಕೋ ಆರ್ಡಿನೇಷನ್ ಇರುವುದಿಲ್ಲ. ಅದ್ದರಿಂದ ಹೌಸಿಂಗ್ ಕೋ ಆಪರೇಟೀವ್ ಸೊಸೈಟಿ, ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿ ಅಥವಾ ಎಂಪ್ಲಾಯಿಸ್ ಸೊಸೈಟಿಗಳಿಗೆ ಇವತ್ತಿನ ದಿವಸ ಲೇಔಟ್ಸ್ ಮಾಡುತ್ತವೆಂದು ಜಾಗವನ್ನು ಕೊಡಿ ಎಂದು ಅವರು ಬಂದರೆ ಅವರಿಗೆ ಈ ತರಹ ಕೊಟ್ಟರೆ ನ್ಯಾಯವಾಗಿರುತ್ತದೆ. ಬೆಂಗಳೂರಿನಲ್ಲಿ ಕೆಲವು ಪ್ರಭಾವಶಾಲಿ ವ್ಯಕ್ತಿಗಳು ಪ್ರೈವೇಟ್ ಲೇಔಟ್‌ಗಳನ್ನು ಮಾಡಿ ಬೇಕಾದಷ್ಟು ಹಣ ಸಂಪಾದಿಸಿದ್ದಾರೆ.

ಅಂಥಹವರಿಗೆ ಅವಕಾಶ ಮಾಡಿಕೊಟ್ಟು ಲಕ್ಷಾಂತರ ರೂಪಾಯಿಗಳನ್ನು ಇವತ್ತಿನ ದಿವಸ ಮಾಡಿದ್ದಾರೆ ಎನ್ನುವ ಒಂದು ದೊಡ್ಡ ದೂರು ಈಗ ಇದೆ. ನನಗೆ ತಿಳಿದಮಟ್ಟಿಗೆ ಹನುಮಂತನಗರದ ಹತ್ತಿರ ಒಂದು ಲೇಔಟ್ ಮಾಡಿದ್ದಾರೆ. ಅದು ಯಾರದೋ ಪ್ರೈವೇಟ್ ಪಾರ್ಟಿಯವರದು ಅದನ್ನಿನ್ನೂ ಟ್ರಸ್ಟ್‌ಬೋರ್ಡಿನವರು ವಶಪಡಿಸಿಕೊಳ್ಳಲಿಲ್ಲ. ಅವರಿಗೆ ಇಪ್ಪರ ಬಗೆ್ಗ ಎಷ್ಟೋ ರೀತಿಯಲ್ಲಿ ವರ್ತಮಾನ ಕೊಟ್ಟರೂ ಕೂಡ ಇದುವರೆಗೆ ಏನೂ ಮಾಡಿಲ್ಲ. ಟ್ರಸ್ಟ್‌ಬೋರ್ಡನವರು ಯಾವ ಒಂದು ಸೈಟನ್ನು ಚದರುಗಜ ಒಂದಕ್ಕೆ 15 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದರೂ ಅದನ್ನು ಪಾಸಗಿಯವರು ಇಪತ್ತು ಚದುರುಗಜ ಒಂದಕ್ಕೆ 40-50 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದಾರೆ. ಅದನ್ನು ಕೊಂಡ ವ್ಯಕ್ತಿ ಇವತ್ತು ಬರೀ ಸೈಟಿಗೆ 10-15 ಸಾವಿರ ರೂಪಾಯಿಗಳನು ಕೊಡಬೇಕೆಂದು ತಗಾದೆ ಮಾಡುತ್ತಿದ್ದಾರೆ. ಆ ರೀತಿಯಲ್ಲಿ ಅನೇಕ ಜನರು ಕೊಂಡುಕೊಳ್ಳುತ್ತಿ

ದ್ದಾರೆ. ಅಂದಮೇಲೆ ಇವತ್ತಿನ ದಿವಸ ಅಂತಹ ಸ್ಟೈಟುಗಳೆಲ್ಲಾ ಖಾಸಗೀ ಜನರಿಗೇ ಹೋಗುತ್ತಿದೆ. ಬೆಂಗಳೂರಿನಲ್ಲಿ ಇಂತಹ ಪ್ರಸಂಗಗಳು ಎಷ್ಟೋ ಕಡೆಗಳಲ್ಲಿವೆ. ಅದ್ದರಿಂದ ಇವತ್ತು ಇದರಲ್ಲಿ ಇರತಕ್ಕ ಸೆಕ್ಷನ್ 31ನ್ನು ಹಾಗೆಯೇ ಈ ಮಸೂದೆಯಲ್ಲಿ ಇಟ್ಟುಕೊಳ್ಳುವುದಾದರೆ. ನಿಜವಾಗಿಯೂ ಬೆಂಗಳೂರನ್ನು ಒಟ್ಟು ರಾಜ್ಯಾದ್ಯಂತ ಎಲ್ಲಾ ಮುನಿಸಿಪಾಲಿಟಿಗಳಿಗೂ ಇದು ಹರಡಿಕೊಂಡು ಅಲ್ಲಿನ ಜನರು ತಮಗೆ ಬೇಕಾಬೇಕಾದ ಹಾಗೆ ಅನುಕೂಲ ಮಾಡಿಕೊಡುವುದಕ್ಕೆ ಒಂದು ಅವಕಾಶವನ್ನು ಇದರಲ್ಲಿ ಮಾಡಿಕೊಟ್ಟಹಾಗೆ ಆಗುತ್ತದೆ. ಆದರೆ ಲೇಔಟ್‌ಗಳನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಡಿ ಎಂಬುದಾಗಿ ನಾನು ಹೇಳುವುದಿಲ್ಲ. ಆ ಕೆಲಸವನ್ನು ಬೇಕಾದರೆ ಮುನಿಸಿಪಾಲಿಟಿಗೇ ಕೊಡಿ ಅಥವಾ ಲೋಕಲ್ ಅತಾರಿಟಿಸ್‌ಗೇ ಕೊಡಿ. ನೀವು ಇಂಪ್ರೂವ್‌ಮೆಂಟ್ ಬೋರ್ಡ್ ಎಂದು ಮಾಡುವಾಗ ಈ ಒಂದು ಕಾರ್ಯಾಚರಣೆಯನ್ನು ಹೌಸಿಂಗ್ ಕೋಆಪರೇಟಿವ್ ಸೊಸೈಟಿ ಮತ್ತು ಎಕರ್ ಸೆಕ್ಷನ್ ಕೋಆಪರೇಟಿವ್ ಸೊಸೈಟಿಗಳಿಗೆ ಮಾತ್ರ ಕೊಡಬೇಕು. ಬೇರೆಯವರಿಗೆ ಈ ಒಂದು ಕಾರ್ಯಾಚರಣೆಯನ್ನು ಕೊಟ್ಟರೆ ನಿಜವಾಗಿಯೂ ಅಕ್ಷಮ್ಯ ಅಪರಾಧವಾಗುತ್ತದೆ. ಮುಖ್ಯವಾಗಿ ಜನ ಸಾಮಾನ್ಯರಿಗೆ ಅನುಕೂಲಗಳು ಆಗಬೇಕು. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹೇಳಿದ ಹಾಗೆ ಕಡಿಮೆ ಬೆಲೆಯಲ್ಲಿ ಇನ್ನು ಮುಂದೆ ಸೈಟುಗಳನ್ನು ಕೊಡುವಾಗ, ಅದನ್ನು ಹೆಚ್ಚು ಬೆಲೆಗೆ ಮಾರಾಟ ಮಾಡದೇ ಇರುವ ಹಾಗೆ ಸರ್ಕಾರ ಮಾಡಬೇಕು.

ಇನ್ನೊಂದು ವಿಚಾರ. ಅದು ಬೆಟರ್‌ಮೆಂಟ್ ಟ್ಯಾಕ್ಸನ್ನು ವಿಧಿಸುವುದು. ಲೆವಿ ಆಫ್ ಬೆಟರ್‌ಮೆಂಟ್ ಟ್ಯಾಕ್ಸ್ ಯಾರಿಗೆ ವಿಧಿಸಬೇಕೆಂಬುದು ಇಲ್ಲಿ ಬಹಳ ಮುಖ್ಯವಾದದ್ದು. ಬೆಟರ್‌ಮೆಂಟ್ ಟ್ಯಾಕ್ಸ್ ಅಂದರೇನು ? ಯಾರು ಆ ತೆರಿಗೆಯನ್ನು ಕೊಡಬೇಕೆಂದು ಮುಖ್ಯ. ಯಾವುದೇ ಪ್ರದೇಶದಲ್ಲಿ ಏನಾದರೂ ಇಂಪ್ರೂವ್‌ಮೆಂಟ್ ಆಗಿದ್ದರೆ ಅದರ ಆಜೂಬಾಜಿನಲ್ಲಿ ಎನಾದರೂ ಮನೆಗಳನ್ನೋ ಅಥವಾ ಅಂಗಡಿಗಳನ್ನೊ ಕಟ್ಟಿದ್ದರೆ ಆ ಒಂದು ಪ್ರದೇಶದಲ್ಲಿ ರೋಡ್, ಫ್ಲಶ್ಶಾಟ್ ಮಾಡಿಸಿದರೆ ಆಗ ಅದರ ಬೆಲೆ ಜಾಸ್ತಿಯಾಗುತ್ತದೆ. ಅಂತಹ ಸಂದರ್ಭದಲ್ಲಿ ಆ ಮನುಷ್ಯ ಬೆಟರ್‌ಮೆಂಟ್ ಟ್ಯಾಕ್ಸ್ ಕೊಡಬೇಕಾಗುವುದೇನೋ ನಿಜ ಇದರಲ್ಲಿಯೂ ಡಿಸ್ಕ್ರಿಮಿನೇಷನ್ ಬೇಕು. ಅದನ್ನು ಸಾಹುಕಾರ ರಾಗಿರುವವರು ಯಾರಿಗೆ ಶಕ್ತಿ ಇದೆಯೋ ಅಂತಹವರು ಕೊಡಬಹುದು ಅದರ ಬಗ್ಗೆ ನನ್ನ ವಿರೋಧ ವೇನೂ ಇಲ್ಲ. ಬಡಜನರು ಅದನ್ನು ಕೊಡಬೇಕಾದರೆ ಹೇಗೆ ? ಈಗ ಒಂದು ಉದಾಹರಣೆಯನ್ನು ಕೊಡಬೇಕೆಂದರೆ, ಯಾವುದೋ ಒಂದು ಸ್ಲಂ ಏರಿಯಾ ಒಂದು ಕ್ಷೇತ್ರದಲ್ಲಿರುತ್ತದೆನ್ನೋಣ. ಅಲ್ಲಿ ಇಂಪ್ರೂವ್‌ಮೆಂಟ್ಸ್ ಮಾಡುವುದಕ್ಕೆ ಹೋಗುತ್ತಾರೆ. ಬಹಳ ಮುಖ್ಯವಾಗಿ ಬೇಕಾಗಿರತಕ್ಕ ಒಂದು ರ್ಯಾಟ್ಸನ್, ಬಾತರೂ ಅಲ್ಲಿ ಕಟ್ಟಿದರೆ, ಆ ಏರಿಯಾದಲ್ಲಿ ರೋಡ್ ಮುಂತಾದವುಗಳನ್ನು ಮಾಡಿದರೆ ಆಗ ಬೆಟರ್‌ಮೆಂಟ್ ಟ್ಯಾಕ್ಸ್ ಅವರೂ ಸಹ ಕಟ್ಟಬೇಕಾಗುತ್ತದೆ. ನಿಮ್ಮ ಈ ಬಿಲ್ಲಿನಲ್ಲಿ ಅಂತಹವರೂ ಕೂಡ ಈ ತೆರಿಗೆಯನ್ನು ಕಟ್ಟಬೇಕೆಂದು ಅವಕಾಶ ಮಾಡಿಕೊಂಡಿದ್ದೀರಿ. ನಾನು ಮೊದಲೇ ಹೇಳಿದಹಾಗೆ ಬೆಟರ್‌ಮೆಂಟ್ ಟ್ಯಾಕ್ಸ್‌ನ್ನು ಯಾರು ಕೊಡುವುದಕ್ಕೆ ಶಕ್ತಿ ಇದೆಯೋ ಅಂತಹವರು ಕೂಡ ಆದರೆ ಯಾರು ಎಕರ್ ಸೆಕ್ಷನ್ ಆಗಿರುತ್ತಾರೋ ಅಂತಹವರ ಮೇಲೆ ಯಾವ ರೀತಿಯಾದಂತ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕುವ ಪ್ರಶ್ನೆ ಬರಕೂಡದು. ಅದಕ್ಕೆ ಖಂಡಿತವಾಗಿ ಅಮೆಂಡ್‌ಮೆಂಟ್ ಆಗಲೇ ಬೇಕು. ಇಲ್ಲದಿದ್ದರೆ ನಾನು ಅದನ್ನು ತೀವ್ರವಾಗಿ ವಿರೋಧ ಮಾಡಬೇಕಾಗುತ್ತದೆ.

ಇನ್ನೊಂದು ಅಂಶ. ಈ ಬೆಟರ್‌ಮೆಂಟ್ ಟಾಕ್ಸ್ ಹಾಕುವ ವಿಚಾರವನ್ನು ಡಿಸ್ಟ್ರಿಕ್ಟ್ ಕೋರ್ಟ್ ಸೆವರು ತೀರ್ಮಾನ ಮಾಡಬೇಕಾಗುತ್ತದೆ. ಆದರೆ ಈ ಬೆಟರ್‌ಮೆಂಟ್ ಟ್ಯಾಕ್ಸ್ ಒಟ್ಟು ವರಮಾನ ಎಲ್ಲಿ ಹೋಗುತ್ತದೆ ಎಂಬುದನ್ನು ನೋಡಬೇಕು. ಅದು ಲೋಕಲ್ ಅತಾರಿಟೀಸ್‌ಗೆ ಹೋಗಬೇಕು. ಅದು ಮತ್ತೆ ಬೇರೆಯವರಿಗೆ ಹೋಗಕೂಡದು. ಏಕೆಂದರೆ ಈಗಲೇ ಲೋಕಲ್ ಅತಾರಿಟೀಸ್‌ಗೆ ಸಾಕಷ್ಟು ಹಣವಿರುವುದಿಲ್ಲ. ಅಂದಮೇಲೆ ಆ ಕೆಲಸಗಳನ್ನು ಅವರಿಗೆ ನೀವೇ ಮಾಡಿ ಎಂಬುದಾಗಿ ಹೇಳಿದರೆ ಅವರು ಹೇಗೆ ಮಾಡುತ್ತಾರೆ ? ಅವರು ಯಾವರೀತಿ ಇದರ ವರಮಾನವನ್ನು ಪಡೆಯುವ ಇದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಾರೆ? ಆದ್ದರಿಂದಲೇ ಈ ತೆರಿಗೆ ಯೆಲ್ಲಾ ಲೋಕಲ್ ಅತಾರಿಟೀಸ್‌ಗೆ ಹೋಗಬೇಕು. ಅದು ಮಾತ್ರ ಬೇರೆ ಯಾರಿಗೂ ಹೋಗಕೂಡ ದೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಕೊನೆಯದಾಗಿ ಪ್ರಧಾನಿಯವರ 20 ಅಂಶಗಳ ಕಾರ್ಯಕ್ರಮ ಏನಿದೆಯೋ ಅದಕ್ಕೆ ಅನುಗುಣವಾಗಿ ಸರ್ಕಾರದವರು ಎಲ್ಲ ಕೆಲಸಕಾರ್ಯಗಳನ್ನು ಕೂಡಲೇ ತೆಗೆದುಕೊಳ್ಳುವುದು ಯೋಗ್ಯ. ಆದರೆ ಪ್ರತಿಯೊಂದಕ್ಕೂ 20 ಅಂಶಗಳ ಕಾರ್ಯಕ್ರಮವೆಂಬುದಾಗಿ ಅನ್ವಯಿಸಿಕೊಂಡು ಜನಗಳಿಗೆ ವಿರೋಧವಾಗಿ ಹಾಗೂ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುವ ಹಾಗೆ ಮಾಡುವುದು ಸರಿಯಲ್ಲ. ಬಡ ಜನರಿಗೆ ಹೆಚ್ಚಿಗೆ ಅನಾನುಕೂಲವಾಗುವ ಹಾಗೆ ಮಾಡಬಾರದು. ನಮ್ಮ ರಾಜ್ಯದಲ್ಲಿ ಇಂಪ್ರೂವ್‌ಮೆಂಟ್ ಬೋರ್ಡ್ ಇರಬೇಕು. ಆದರೆ ರಾಜಕೀಯ ದುರುದ್ದೇಶ ಇಲ್ಲದೇ ಇದ್ದವರನ್ನು ಮಟ್ಟ ಹಾಕುವ ಪ್ರಯತ್ನಕ್ಕೆ ನೀವು ಬರಕೂಡದೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B.B SAYANAK (Belgaum): Mr. Deputy Speaker Sir, the Hon,ble Minister has brought this Bill on Karnatka Improvement Boards. I would like to make some observations thereon.

Sir, the policy of the Central Government is to decentralise the powers and that is why there are these Municipalities, Corporations and Village Panchayats functioning. But the Government is now going to curtail the powers of the Municipalities and the Municipal Coropo-ration by bringing in this Board for establishment of Improvement Boards. In the name of emergency the Government is not holding elections. There are so many Municipalities for which elections have not been held for over eleven years. For example the Nippani Municipality. Then there are the Town Planning authorities which are not doing anything though it exists in Belgaum also. If the Town Planning Authorities and Municipalities are there then what is the use to have these Improvement Trust Boards. Now it is proposed to constitute a Board for Belgaum. In Hubli you have given chance to the Advocate; in Gulbarga Mr. Dharm Singh, an Hon,ble Member of this House, has been nominated as Chairman. But to whom you have given a chance in Belgaum? There are three persons whom you have nominated, viz , Mr. N.A Hammannavar, Mr. Shivaji Rao and Smt Radha Bai, all these persons belong to Congress Party. The Chairman of this Board has purchased a big palace in the erstwhile State This man is not willing to give loans to the public How is he going to improve the City of Belgaum? A man who got the lands belonging to Central Government, which was given to the State Government by the Central Government, and he has constructed a Krishik Bhavan in Belgaum illegally. Is this Gentleman going to do justice to Belgaum City or improve the said City? In how many committees this man is placed? He is in three to four committees. Another person is in six to seven committes. Why are you nominating only these persons on all the committees? Is it because they all belong to your party? Are is it because there are no other persons available?

With these words I thank the chair and conclude my speech.

†ಶ್ರೀ ಡಿ.ಕೆ. ನಾಯ್ಕರ್.- ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೂ ಶ್ರೀಮಾನ್ ಟಿ.ಆರ್. ಶಾಮಣ್ಣ ನವರು, ಕಾಗೋಡು ತಿಮ್ಮಪ್ಪನವರು, ಕೃಷ್ಣನ್‌ರವರು ಮತ್ತು ಸಯನಕ್‌ರವರು ಈ ಬಿಲ್ಲಿನ ಬಗ್ಗೆ ಮಾತನಾಡುವಾಗ ಕೆಲವೊಂದು ಕಟಂತರವಾದ ಟೀಕೆಗಳನ್ನೂ ಕೂಡ ಈ ಸಂದರ್ಭದಲ್ಲಿ ಮಾಡಿದ್ದಾರೆ ಸ್ವಾಮಿ ಬಹುಶಃ ಮಾನ್ಯ ಕಾಗೋಡು ತಿಮ್ಮಪ್ಪನವರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನ ಗುರಿ ಮತ್ತು ಆದರ ವ್ಯಾಪ್ತಿ ಏನು ಏನ್ನುವುದನ್ನು, ಹಾಗೂ ಆದರಿಂದ ಆಗುವ ಲಾಭ ಏನು ಎನ್ನುವುದನ್ನು ವಿಶೇಷವಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನುವುಂಥದ್ದನ್ನು ತಮ್ಮ ಮುಖಾಂತರ ತಿಳಿಸಬೇಕಾದರೆ ಸ್ವಲ್ಪ ವ್ಯಥೆಯಾಗುತ್ತದೆ ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗಳು ಬೆಂಗಳೂರು ನಗರದಲ್ಲಿ, ಮೈಸೂರು ನಗರಗಳಲ್ಲಿ ಈಗಾಗಲೇ ಕಲಸ ಮಾಡುತ್ತಿವೆ: ಹಾಗೂ ಆದರಿಂದ ಆಗುವ ಲಾಭವೇನು ಎನ್ನುವಂಥದ್ದನ್ನು ಕರಿತು ಮಾನ್ಯ ಕೆ.ಪುಟ್ಟಿಸ್ವಾಮಿಯವರು ತಮ್ಮ ಎರಡು ಮಾತುಗಳಲ್ಲಿ ಹೇಳಿದ್ದಾರೆ ಈ ಸಂದರ್ಭದಲ್ಲಿ ಮಾನ್ಯ ಕೃಷ್ಣನ್‌ನವರಿಗೆ ವಂದನೆಗಳನ್ನ ಅರ್ಪಿಸಬೇಕಾಗುತ್ತದೆ. ಹೀಗೆ ಮಾಡತಕ್ಕಂಥದ್ದು ಅತ್ಯಾವಶ್ಯಕವೆಂದು ಅವರು ಸಮರ್ಥನೆ ಮಾಡಿದ್ದಾರೆ. ತಾವು ಯಾವುದೇ ಟೀಕೆಗಳನ್ನು ಮಾಡಿದರೂ ಕೂಡ ....

ಶ್ರೀ ಎಂ.ಎಸ್. ಕೃಷ್ಣನ್ :- ಬೆಂಗಳೂರು ನಗರಗಳಂಥ ದೊಡ್ಡದೊಡ್ಡ ಪಟ್ಟಣಗಳಲ್ಲಿ ಅವಶ್ಯಕತೆ ಇದೆ ಬೇರೆ ಕಡೆ ಅಷ್ಟು ಅವಶ್ಯಕತೆ ಇಲ್ಲವೆಂದು ಹೇಳಿದ್ದೆ ಸ್ವಾಮಿ.

ಶ್ರೀ ಡಿ ಕೆ ನಾಯ್ಕರ್:-ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ಈ ಕಾರ್ಯವನ್ನು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗಳವರು ಮಾಡಬೇಕೆಂದು ಏನು ಉದ್ದೇಶ ಇಟ್ಟಿ ಕೊಂಡಿದ್ದೀರಿ ಅದನ್ನು ಮುನಿಸಿಪಾಲಟಿಗಳು ಮಾಡಬಹುದಿತ್ತಲ್ಲಾ ಎಂದು ಶೆಂಕೆಯನ್ನು ಕೆಲವರು ವ್ಯಕ್ತ ಮಾಡಿದ್ದಾರೆ ಸ್ವಾಮಿ, ತಮ್ಮ ವೀಜಖೇನ ಮಾನ್ಯ ಸದಸ್ಯರಿಗೆ ತಿಳಿಯವಡಿಸುವುದೇನೆಂದರೆ ನಾವು ೨೦೭೫ ನೇ ಇಸ್ವಿಯಲ್ಲಿ ಸೈಟಲೆಸ್ ಪರ್ಸನ್ಸ್‌ಗೆ ಸೈಟ್ ಕೊಡಲು ಇಷ್ಟು ಜಮೀನನ್ನು ಅಕ್ವೈರ್ ಮಾಡಬಹುದೆಂದು ಹೇಳಿ ಹಾಗೂ ವಂತ್ರಿತರ ಸೌಕರ್ಯ ಕೊಡುವ ಬಗ್ಗೆ ಮುನಿಸಿಪಾಲಿಟಿಗಳಿಗೆ ಹೇಳಿದ್ದೆವು. ಆದರೂ ಇಲ್ಲಿಯವರೆಗೆ ಯಾವ ಮುನಿಸಿಪಾಲಟಿಯವರೂ ಮುಂದೆ ಬಂದು ಈ ಕೆಲಸವನ್ನು ಮಾಡುವುದಕ್ಕೆ ಆಗಿಲ್ಲ ಆಗಿಲ್ಲ ಚುನಾಯಿತ ಪ್ರತಿನಿಧಿಗಳು ತಾವು ಇಲ್ಲಿ ಏನಿದ್ದೀರಿ, ಇಲ್ಲಿ ಬಂದು ಹೇಳುತ್ತೀರಿ, ಮಾನ್ಯ ಕೃಷ್ಣನ್‌ರವರು ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗಳಲ್ಲಿ ಯಾವುದೋ ಒಂದು ಪಕ್ಷದವರನ್ನು ಅಧಿಕಾರದಲ್ಲಿ ತುದು ಕೂಡಿಸಿ ಬಿಡುತ್ತೀರಿ. ಆ ಉದ್ದೇಶದಿಂದ ಇದನ್ನು ರಚನೆ ಮಾಡುತ್ತಿದ್ದೀರಿ ಎನ್ನುವಂಥ ಸಂಶಯವನ್ನು ವ್ಯಕ್ತ ಮಾಡಿದ್ದಾರೆ. ಆದರೆ ಅದು ನಿಜವಾಗಿಯೂ ಸತ್ಯಕ್ಕೆ ಬಹುದೂರ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಏತಕ್ಕೆಂದರೆ ದಾವಣಗೆರೆ ಮುನಿಸಿಪಾಲಿಟಿಯಲ್ಲಿ ಮಾನ್ಯ ಕೃಷ್ಣನ್‌ರವರ ಪಕ್ಷದವರೇ ಅಧ್ಯಕ್ಷರಾಗಿದ್ದಾರೆ. ಅವರು ಈ ಬೋರ್ಡ್‌ನಲ್ಲಿ ಮೆಂಬರ್ ಆಗಿದ್ದಾರೆ.

ಶ್ರೀ ಕೊಣಂದೂರು ಲಿಂಗಪ್ಪ:—ಕೇರಳ ಮಂತ್ರಿ ಮಂಡಲದಲ್ಲಿ ಅಚ್ಯುತಮೆನನ್..... .. ...

ಶ್ರೀ ಡಿ.ಕೆ.ನಾಯ್ಕರ್ :—ದಯವಿಟ್ಟು ಸ್ವಲ್ಪ ನಾವು ಹೇಳುವುದನ್ನು ಕೇಳಬೇಕು. ನೀವು ಇಷ್ಟು ಹೊತ್ತು ಮಾಡಿದಂಥ ಎಲ್ಲಾ ಟೀಕೆಗಳನ್ನು ನಾವು ಸಾವಧಾನವಾಗಿ ಕೂಳಿತುಕೊಂಡು ಕೇಳಿದ್ದೇವೆ. ಈಗ ನಾವು ಮಾತನಾಡುವಾಗ ಮಧ್ಯೆ ಮಧ್ಯೆ ಪ್ರವೇಶಿಸ ಕೂಡದೆಂದು ಮಾನ್ಯ ಅಧ್ಯಕ್ಷರವರ ಮುಖಾಂತರ ಕೇಳಿಕೊಳ್ಳುತ್ತೇನೆ. ಆದುದರಿಂದ ಅಂಥ ಯಾವುದೇ ಒಂದು ಪೈಪೋಟಿ ಆಗಿಲ್ಲ. ಬೇರೆ ಪಕ್ಷದ ಜನರು ಆರಿಸಿ ಬಂದಿದ್ದಾರೆ. ಅಂಥವರೂ ಕೂಡ ಈ ಟ್ರಸ್ಟ್ ಬೋರ್ಡಿನಲ್ಲಿ ಮೆಂಬರ್, ಆಗಿದ್ದಾರೆ ಎನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಮುನಿಸಿಪಾಲಿಟಿಗಳಿಗೆ ಆರಿಸಿ ಬಂದಿರತಕ್ಕಂಥ ಸದಸ್ಯರೂ ಕೂಡ ಮೆಂಬರ್ಸ್ ಆಗಿರತ್ತಾರೆ. ಯಾವುದೇ ರೀತಿಯ ಪೈಪೋಟಿಗೆ ಅಲ್ಲಿ ಅವಕಾಶವಿಲ್ಲವೆಂದು ಸ್ಪಷ್ಟವಾಗಿ ಇಲ್ಲಿ ಹೇಳುತ್ತಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರಂ ಇದರಿಂದ ಖರ್ಚು ಹೆಚ್ಚಾಗುತ್ತದೆ,ಆದರಿಂದ ಜನಗಳ ಮೇಲೆ ತೆರಿಗೆ ಹೆಚ್ಚುಬೀಳುತ್ತದೆ ಎಂದು ಹೇಳಿದ್ದಾರೆ. ಆದರೆ ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ, ಈ ಬೋರ್ಡಿನ ಉದ್ದೇಶವೇನೆಂದರೆ ಸೈಟ್‌ಗಳನ್ನು ಸರಿಯಾದ ಕ್ರಮದಲ್ಲಿ ಹಂಚಬೇಕು ಹಾಗೂ ಪಟ್ಟಣಗಳು ಅಕ್ರಮವಾಗಿ ಬೆಳೆಯಬಾರದು ಎನ್ನುವ ಥ ಉದ್ದೇಶ ವಿರುವುದನ್ನು ಮಾನ್ಯ ಶಾಮಣ್ಣನವರೂ ಸಹ ಒಪ್ಪಿಕೊಂಡಿದ್ದಾರೆ ಆದರೆಈಗ ಆಗಿರತಕ್ಕಂಥ ಪರಿಸ್ಥಿತಿ ಏನೆಂದರೆ ಯಾರೋ ಒಬ್ಬ ದೊಡ್ಡ ಮನುಷ್ಯರ ಜಮೀನು ಊರ ಹತ್ತಿರವೇ ಇರುತ್ತದೆಂದು ಇಟ್ಟುಕೊಳ್ಳೋಣ, ಅಂಥವರ ಜಮೀನನ್ನು ಅಕ್ವೈರ್ ಮಾಡಬೇಕು ಎಂದರೆ ಅವರು ತಮ್ಮ ಪ್ರಭಾವವನ್ನು ಉಪಯೋಗಿಸಿ ಜಮೀನನ್ನು ಅಕ್ವೈರ್ ಮಾಡದಂತೆ ಮಾಡುತ್ತಾರೆ. ಈ ರೀತಿ ಆಗಬಾರದೆಂದೇ ಈ ಬೋರ್ಡ್‌ನ್ನು ರಚನೆ ಮಾಡುತ್ತಿದ್ದೇವೆ. ಮಾನ್ಯ ಶಾಮಣ್ಣನವರು ಏನು ಹೇಳಿದರು. ಪಟ್ಟಣಗಳಲ್ಲಿ

ಸೈಟುಗಳನ್ನು ಹಂಚುವಾಗ ಒಂದು ಸರಿಯಾದ ಪ್ಲಾನ್ ಪ್ರಕಾರ ಹಂಚಬೇಕೆಂದು ಏನು ಸಲಹೆ ಮಾಡಿದ್ದಾರೆ ಅದು ಸರ್ಕಾರದವರ ಗಮನದಲ್ಲಿದೆ ಆದುದರಿಂದ ಇನ್ನು ಮುಂದೆ ಜಮೀನನ್ನು ಅಕ್ವೈರ್ ಮಾಡುವಾಗಲೇ ಆಗಲೀ, ಇಲ್ಲ ಸೈಟುಗಳನ್ನು ಹಂಚುವಾಗಲೀ ಆಗಲೀ ಅದೇ ರೀತಿ ಮಾಡಬೇಕು ಎನ್ನುವಂತಾದ್ದು ಸರ್ಕಾರದ ಉದ್ದೇಶವಿದೆ.

ಇನ್ನು ಸೈಟ್‌ಗಳ ಬೆಲೆ ಎಲ್ಲಿಗೆ ಹೋಗಿದೆ ಎನ್ನುವುದನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಬಹುಶ: ಅರಿತುಕೊಂಡ ಹಾಗೆ ಕಾಣಿಸುವುದಿಲ್ಲ ಈಗ ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ಒಂದು ಗುಂಟೆಗೆ ೧೫೦–೨೦ ಸಾವಿರ ರೂಪಾಯಿಗಳಿಗೆ ಹೋಗಿದೆ. ಈಗೆ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿರ ತಕ್ಕಂಥ ಸಿ. ಐ. ಟಿ. ಬಿ. ಯವರು ಜಮೀನನ್ನು ಅಕ್ವೈರ್ ಮಾಡಿಕೊಂಡಿರುವುದರಿಂದ ಸೈಟ್‌ಗಳ ಬೆಲೆ ಏನಾಗಿದೆ ? ಮತ್ತು ವೀಕರ್ ಸೆಕ್ಷನ್ಸ್ ಆದ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಕನ್‌ಸೆಷನಲ್ ರೇಟ್ಸ್‌ನಲ್ಲಿ ಸೈಟ್‌ಗಳನ್ನು ಕೊಟ್ಟರೂ ಕೂಡ ಅದರಿಂದ ಬೋರ್ಡ್‌ನವರಿಗೆ ಲಾಭ ಸಿಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮುನಿಸಿಪಾಲಿಟಿಯವರೂ ಜಮೀನನ್ನು ಅಕ್ವೈರ್ ಮಾಡಿಕೊಳ್ಳಲಿ, ಇಲ್ಲ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ ಬೋರ್ಡ್‌ನವರೇ ಅಕ್ವೈರ್ ಮಾಡಿಕೊಳ್ಳಲಿ, ಅಕ್ವಿಜಷನ್ ಕಾಸ್ಟ್ ಒಂದೇ ಆಗುತ್ತದೆಯಲ್ಲವೇ ?

ಶ್ರೀ ಡಿ. ಕೆ ನಾಯ್ಕರ್.—ಆ ವಿಷಯದ ಬಗ್ಗೆ ಆಮೇಲೆ ಹೇಳುತ್ತೇನೆ. ಆದುದರಿಂದ ಈ ಸಿ. ಐ. ಟಿ. ಬಿ. ಯ ವ್ಯಾಪ್ತಿ ಏನೆಂದರೆ, ಉದ್ದೇಶವೇನೆಂದರೆ ನೊ ಲಾಸ್ ನೊ ಗೇನ್ ಪ್ರಾಫಿಟ್ ಆಧಾರದ ಮೇಲೆ ಸೈಟ್‌ಗಳನ್ನು ಆಗ ಕಡಿಮೆ ಬೆಲೆಗೆ ಕೊಡುವಂತೆ ವ್ಯವಸ್ಥೆ ಮಾಡುವ ಮಹತ್ವರವಾದ ಒಂದು ಉದ್ದೇಶವಿದೆ, ಮತ್ತು ಯಾರು ಸೈಟ್‌ಲೆಸ್ ಪರ್ಸನ್ಸ್ ಇದ್ದಾರೆ ಹಾಗೂ ಪಿಡಜನರಿದ್ದಾರೆ ಅವರಿಗೂ ರೀಜನಬಲ್ ರೇಟ್ಸ್‌ಗೆ ಸೈಟುಗಳನ್ನು ಕೊಡುವ ಉದ್ದೇಶದಿಂದ ಈ ಬೋರ್ಡ್‌ನ್ನು ಮಾಡುತ್ತಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು ತಮ್ಮ ಹೇಳಿಕೆಯ ಪ್ರಕಾರ ಇದನ್ನು ಮುನಿಸಿಪಾಲಿಟಿಯವರೇ ಮಾಡಬಹುದಾಗಿತ್ತಲ್ಲವೆ ಎಂದು, ಆದರೆ ಸ್ವಾಮಿ, ನಾನೊಂದು ಮಾತು ಹೇಳುತ್ತೇನೆ. ಇವರು ನಮ್ಮ ಕಾಂಗ್ರೆಸ್ ಪಕ್ಷದವರನ್ನು ಮಾತ್ರ ಟೀಕೆ ಮಾಡುತ್ತಾರೆ. ಇನ್ನಿತರ ಅನೇಕ ಪಕ್ಷದವರು ಅಧಿಕಾರದಲ್ಲಿದ್ದುದನ್ನು ನಾನು ನೋಡಿದ್ದೇವೆ. ಶಿರಸಿ ತಾಲ್ಲೂಕಿನಲ್ಲಿ ಜನಸಂಘದ ಪಕ್ಷದವರು ಆಲ್ಲಿ ಅಧಿಕಾರದಲ್ಲಿದ್ದರೂ. ಅವರಿಗೂ ಕೂಡ ನಾವು ಈ ವ್ಯವಸ್ಥೆ ಮಾಡಿ ಎಂದು ಹೇಳಿದಾಗ ಅವರೂ ಕೂಡ ಮಾಡಲಿಲ್ಲ. ನಾನು ಎಷ್ಟೆಷ್ಟೋ ಮುನಿಸಿಪಾಲಿಟಿಗಳ ಇತಿಹಾಸವನ್ನು ನೋಡಿದ್ದೇನೆ. ಸಿ. ಐ ಟಿ. ಬಿ ನ ಉದ್ದೇಶವೇನು ಆದರ ಕೆಲಸಗಾರ್ಯಗಳೇನು ಎನ್ನುವುದನ್ನು ಮಾನ್ಯ ಸದಸ್ಯರುಗಳಾದ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತಿತರ ಸ್ನೇಹಿತರುಗಳು ತಿಳಿದುಕೊಂಡರೆ ಬಹುಶ: ಅವರು ಈ ತರಹದ ಕಟು ಟೀಕೆಗಳನ್ನು ಮಂಡುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ, ಇನ್ನು ಯಾರೋ ಒಬ್ಬರಿಗೆ ಅಧಿಕಾರವನ್ನು ಕೊಡಲಿಕ್ಕೆ ಈ ಬೋರ್ಡ್‌ನ್ನು ತಂದಿದ್ದಾರೆ ಎನ್ನುವಂಥ ಮಾತನ್ನು ಸಹ ಮಾನ್ಯ ಸದಸ್ಯರುಗಳು ಹೇಳಿದರು. ಇವತ್ತು ನಾವು ಮಾನ್ಯ ಕಾಗೋಡು ತಿಮ್ಮಪ್ಪನವರ ಕಡೆಯವರನ್ನು ಅಲ್ಲಿಗೆ ಹಾಕಿದರೆ ಶ್ರೀ ಸೆಯನಕ್‌ರವರು ಟೀಕೆ ಮಾಡುತ್ತಾರೆ, ಇಲ್ಲ ಶ್ರೀ ಸಯನಕ್‌ರವರ ಕಡೆಯವರನ್ನು ಹಾಕಿದರೆ ಶ್ರೀ ಕಾಗೋಡು ತಿಮ್ಮಪ್ಪನವರು ಟೀಕೆ ಮಾಡುತ್ತಾರೆ. ಬರೀ ಹೀಗೆ ಟೀಕೆ ಮಾಡುವುದೇ ಒಂದು ಉದ್ದೇಶವಾಗಿರಬಹುದು ಇವತ್ತು ನಾವು ಯಾರನ್ನೇ ಆಗಲೀ ಅಧಿಕಾರ ಸ್ಥಾನದಲ್ಲಿ ಕೂರಿಸಿದ ಮೇಲೆ ಅವರು ಸರಿಯಾಗ ಕೆಲಸ ಮಾಡುತ್ತಾರೋ ಇಲ್ಲವೋ ಎನ್ನುವುದನ್ನು ಕೂಡ ನಾವು ನೋಡಬೇಕು ಮಾನ್ಯ ಸಯನಕ್‌ರವರಿಗೆ ಅಲಿಗೇಷನ್ ಮಾಡುವಂಥ ಅಧಿಕಾರವಿದೆ. ಈ ಸದನದಲ್ಲಿ ಹಕ್ಕುಬಾಧ್ಯತೆಗಳು ಕೂಡ ಇವೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಮಾನ್ಯ ಸಯನಕ್‌ರವರು ಪ್ರಿಮೇಚ್ಯೂರ್ ಆಗಿ ಮಾತನಾಡಿದ್ದಾರೆಂದು ಇಷ್ಟು ಹೇಳಬೇಕಾಗಿದೆ.

SRI B. B SAYANAK.—We are criticising that we have not given a chance to Sri Pawashe, in the Land Tribunal.

SRI D. DEVARAJ URS.—If that is so, we will recommend his name.

ಶ್ರೀ ಡಿ. ಕೆ. ನಾಯ್ಕರ್. . . ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತನ್ನು ಮಾನ್ಯ ಸದಸ್ಯರಾದ ಶಾನಭಾಗ್‌ರವರು ಹೇಳಿದರು, ಅದು ಏನೆಂದರೆ ನಾವು ಎಲ್ಲಿ ನಗರಾಭಿವೃದ್ಧಿ ಮಂಡಳಿಗಳನ್ನು ಸ್ಥಾಪನೆ ಮಾಡುತ್ತೇವೆ ಅಲ್ಲಿ ಸ್ಲಮ್‌ಗಳು ಬೆಳೆಯುತ್ತವೆ ಎಂದು ಮಾತನಾಡಿದ್ದಾರೆ. ಇವೊತ್ತಿನ ದಿವಸ

ಸ್ಲಮ್‌ಗಳು ಬೆಳೆಯುವುದಕ್ಕೂ ಮತ್ತು ನಗರಾಭಿವೃದ್ಧಿ ಮಂಡಳಿಗಳನ್ನು ಸ್ಥಾಪನೆಮಾಡುವುದಕ್ಕೂ ಯಾವ ಸಂಬಂಧ ಇದೆ ಎನ್ನುವುದನ್ನು ಮಾನ್ಯ ಸದಸ್ಯರು ತಾವೇ ತಿಳಿದುಕೊಳ್ಳಬೇಕು. ಈಗ ಸ್ಲಮ್ಸ್ ಯಾವ ರೀತಿಯಲ್ಲಿ ಬೆಳೆಯುತ್ತವೆ ಎಂದರೆ ಎಲ್ಲೆಲ್ಲಿ ಇಂಡಸ್ಟ್ರಿಗಳು ಬೆಳೆಯುತ್ತವೆ ಆಲ್ಲಿಗೆ ಕೆಲಸ ಮಾಡಲಿಕ್ಕೆ ಬರತಕ್ಕ ಕೂಲಿಗೆಯರು ಏನು ಇರುತ್ತಾರೆ ಅವರುಗಳು ಅಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ ಇವೊತ್ತು ಮಾನ್ಯ ಶಾಮಣ್ಣನವರು ಹೇಳಿದಂತೆ ನಗರಾಭಿವೃದ್ಧಿ ಮಂಡಳಿಯವರು ಏನಾದರೂ ಸ್ಲಮ್ಸ್‌ಗಳು ಬೆಳೆಯಲು ಏನಾದರೂ ಜನರಿಗೆ ಗುಡಿಸಲುಗಳನ್ನು ಹಾಕಿಕೊಡುವ ಪರಿಸ್ಥಿತಿ ಏನಾದರೂ ಇವೆಯೇ ಎಂದು ಕೇಳುತ್ತೇನೆ ? ಆದರ ತದ್ವಿರುದ್ಧವಾಗಿ ನಗರಾಭಿವೃದ್ಧಿ ಮಂಡಳಿಯವರು ಸ್ಲಮ್ಸ್ ಕ್ಲಿಯರೆನ್ಸ್ ಮಾಡುತ್ತಾರೆ ಎನ್ನುವುದರ್ನು ಮಾನ್ಯ ಶಾಮಣ್ಣನವರು ತಿಳಿಯಬೇಕು, ಈ ನಗರಾಭಿವೃದ್ಧಿ ಮಂಡಳಿಗಳನ್ನು ಮಾಡುವುದರಿಂದ ಈ ಸ್ಲಮ್ಸ್‌ಗಳು ಹೆಚ್ಚಾಗುತ್ತವೆ ಎಂದು ಮಾನ್ಯ ಶಾಮಣ್ಣನವರು ಹೇಳುವೆ ಮಾತು ನಿಜವಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಸ್ಲಮ್ಸ್ ಕ್ಲಿಯರೆನ್ಸ್ ಮಾಡುವುದಕ್ಕೆ ಕಾರ್ಪೋರೇಷನ್‌ಗೆ ಬರುವುದಿಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.— ಈಗ ಸ್ಲಮ್ಸ್ ಕ್ಲಿಯರೆನ್ಸ್ ಮಾಡುವುದಕ್ಕೆ ಬೇರೆ ಒಂದು ಸಂಸ್ಥೆ ಇರುವುದರಿಂದ ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇನ್ನು ಮಾನ್ಯ ಸದಸ್ಯರೇ ಈ ಪ್ರೈವೇಟ್ ಲೇಔಟ್ ಬಗ್ಗೆ ಒಂದೆರಡು ಮಾತನ್ನು ಹೇಳಿದ್ದಾರೆ, ಅವರು ಕೊಟ್ಟಿರತಕ್ಕ ಸಲಹೆ ಏನು ಇದೆ, ಇನ್ನು ಅಂತಹ ಪರಿಸ್ಥಿತಿ ಬರುವುದಿಲ್ಲ, ಏಕೆಂದರೆ ಈಗಾಗಲೇ ಅರ್ಬನ್ ಸೀಲಿಂಗ್ ಬಂದಿರುವುದರಿಂದ ಅದರ ಬಗ್ಗೆ ಯೋಚನೆ ಮಾಡ ಬೇಕಾಗಿಲ್ಲ ಏಂದು ಹೇಳುತ್ತೇನೆ. ಇಷ್ಟು ಹೇಳಿ ನಾನು ಈಗ ತಂದಿರತಕ್ಕಂಥ ಮಸೂದೆಗೆ ಮಾನ್ಯ ಸದಸ್ಯರು ಒಟ್ಟಿಗೆ ಕೊಟ್ಟು ಪಾಸ್ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಅರ್ಬನ್ ಸೀಲಿಂಗ್ ಲಿಮಿಟ್ ಪ್ರಕಾರ ಮಾಡಿದರೂ ಕೂಡ ಅದಕ್ಕೂ ಮುಂಚೆ ಪ್ರೈವೇಟ್ ಲೇ ಔಟ್ ಮಾಡಿರುತ್ತಾರೆ. ಹೇಗೆ ಎಂದರೆ ನೀವು ಕೊಟ್ಟಿರತಕ್ಕ ವಿಶಾಲವಾದ ಜಾಗ ಇರುತ್ತದೆ, ಈ ಸೀಲಿಂಗ್ ಬರುವುದಕ್ಕೆ ಅತಂಕೂಲವಾಗಿ ಇರುವ ರೀತಿಯಲ್ಲಿ ಕೆಲವರು ಮಹನೀಯರು ಸೇರಿಕೊಂಡು, ಅವರು ಅದನ್ನು ಪ್ರೈವೇಟ್ ಲೇ ಔಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ, ನಿಮ್ಮ ಪ್ರಕಾರ ಅವರಿಗೆ ಕೊಡವುದಕ್ಕೆ ಅಷ್ಟದ ಇರುತ್ತದೆ. ಆದುದರಿಂದ ಈ ಪ್ರೈವೇಟ್ ಲೇ ಔಟ್ ಕೊಡಬೇಕಾದರೆ, ಇಂಡಸ್ಟ್ರೀಸ್, ಷಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್, ಮತ್ತು ಸಹಕಾರ ಸಂಘಗಳಿಗೆ ಮಾತ್ರ ಕೊಡುತ್ತೇವೆ ಬೇರೆಯವರಿಗೆ ಕೊಡುವುದಿಲ್ಲ ಎಂದು ಹೇಳುವುದಕ್ಕೆ ತಮಗೆ ತೊಂದರೆ ಏನಿದೆ.

ಶ್ರೀ ಡಿ. ಕೆ. ನಾಯ್ಕರ್. —ಈಗ ನಗರಾಭಿವೃದ್ಧಿ ಮಂಡಳಿಯಲ್ಲಿ ನಾನು ತಿಳಿದುಕೊಂಡಿರುವ ಪ್ರಕಾರ ಪ್ರೈವೇಟ್ ಲೇ ಔಟ್ಸ್‌ಗೆ ಎನ್‌ಕರೇಜ್‌ಮೆಂಟ್ ಪಾಡಬಾರದು ಎಂದು ಇನ್‌ಸ್ಟ್ರಕ್ಷನ್ ಕೊಟ್ಟಿದೆ ಈಗ ಅರ್ಬನ್ ಸೀಲಿಂಗ್ ಬಂದಮೇಲೆ ಈ ಪ್ರಶ್ನೆ ಬರುವುದಿಲ್ಲ ಏಂದು ಹೇಳಿದೆದ್ದೇನೆ ಏಕೆಂದರೆ ಈ ಸೀದಂಗ್ ಬಂದಮೇಲೆ ೧೦೨೦ ಸ್ಕ್ವೇರ್ ಮೀಟರ್‌ಗಿಂತ ಹೆಚ್ಚು ಜಾಗ ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ ಆದರೂ ಕೂಡ ಈ ಪ್ರೈವೇಟ್ ಲೇ ಔಟ್ಸ್‌ಗೆ ಡಿಸಕರೇಜ್ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಗಮನಕ್ಕೆ ತೆಗೆದುಕೊಂಡು ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೇನೆ.

MR. DEPUTY SPEAKER.—The question is :

"That the Karnataka Improvement Boards Bill, 1976 be taken into consideration."

The Motion was adopted.

Clause 2 to 72

MR. DEPUTY SPEAKER,—As there are no amendments to clauses, shall put all the clasuses to the vote of the House,

SRI T. R. SHAMANNA —Sir, we did not know that this Bill would come up today ; otherwise we would have tabled amendments to it in time.

MR. DEPUTY SPEAKER —I was well known what would be taken up today. I myself made an announcement of the decision taken by the Business Advisory Committee. In that report it has been intimated quite in advance what would be taken up each day.

SRI M. S. KRISHNAN.—Not quite in advance.

MR. DEPUTY SPEAKER.—If the Hon Members want to seek time to table amendments now, I should straightway say that this is not the occasion for it. In fact, some amendments have been sent to the office at the fag end of the day and orders have been issued that they should be rejected. Otherwise it will create confusion for the entire House. Now, I shall put clause 2 to 72 to the vote of the House. The question is :

"That clauses 2 to 72, both inclusive do stand part of the Bill."

The Motion was adopted.

Clauses 2 to 72, both inclusive were added to the Bill.

Clause 1, Etc.,

MR. DEPUTY SPEAKER.—The question is :

"That Clause 1, the Long Title, the Preamble and Enacting Fromula, do stand part of the Bill."

The Motion was adopted.

Clause 1, Long Title, the Preamble and the Enacting Formula were added to the Bill.

Motion to Pass

D. K. NAIKAR.—Sir, beg to move :

"That the Karnataka Improvement Boards Bill, 1976 be passed."

MR. DEPUTY SPEAKER.—The question is :

"That the Karnataka Improvment Boards Bill, 1976 be passed."

The Motion was adopted and the Bill was passed.

Statement by the Cheif Minister.

re : Suspension of the Deputy Dircetor in the Social Welfare Department.

SRI D. DAVARAJ URS (Chief Minister).—Before I proceed to move the Bill for the conideration. with your permission, I want to make a small announcement with regard to the charge made by Sri B.